

# ಅಧ್ಯಾಯ–IV
# ಪ್ರಾಚೀನ ಪಾರಂಪರಿಕ ಸ್ಮಾರಕಗಳ ರಕ್ಷಣೆ ಹಾಗೂ ಸುರಕ್ಷತೆ

## ಅಧ್ಯಾಯ: IV

### ಪ್ರಾಚೀನ ಪಾರಂಪರಿಕ ಸ್ಮಾರಕಗಳ ರಕ್ಷಣೆ ಹಾಗೂ ಸುರಕ್ಷತೆ

ಈ ಅಧ್ಯಾಯವು ಐತಿಹಾಸಿಕ ಸ್ಮಾರಕಗಳ ರಕ್ಷಣೆ, ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಇಲಾಖೆಯು ಕೈಗೊಂಡಿರುವ ಪ್ರಯತ್ನಗಳಲ್ಲಿನ ಅಂಶಗಳನ್ನು ಎತ್ತಿ ತೋರಿಸುವುದು. ಇಲಾಖೆಯು ಯಾವುದೇ ಚಾತುರ್ಯತೆಯಿಂದ ಕೂಡಿದ ಸಂರಕ್ಷಣಾ ಯೋಜನೆಯನ್ನು ಹೊಂದಿರುವುದಿಲ್ಲ ಹಾಗೂ ಸಂರಕ್ಷಣಾ ಪ್ರಯತ್ನಗಳಲ್ಲಿ ಪ್ರಾದೇಶಿಕ ಅಸಮತೋಲನವಿರುವುದು. ಸ್ಮಾರಕಗಳ ನಿರ್ಮಾಣದ ಸಾಮರ್ಥ್ಯತೆಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಿಯತಕಾಲಿಕ ಪರೀಕ್ಷಣೆಗಳನ್ನು ಇಲಾಖೆಯು ನಡೆಸಿರಲಿಲ್ಲ ಹಾಗೂ ಸಂರಕ್ಷಣಾ ಕಾರ್ಯಚಟುವಟಿಕೆಗಳು ಭದ್ರತಾ ಸಿಬ್ಬಂದಿಯ ಕೊರತೆಯ ಕಾರಣ ಹಾಗೂ ಅಸಮರ್ಪಕ ತಾಂತ್ರಿಕ ಮಧ್ಯಸ್ತಿಕೆಗಳ ಕಾರಣ ಸೀಮಿತ ಪ್ರಮಾಣದಲ್ಲಿದ್ದವು. ನಿರ್ವಹಣಾ ಕಾರ್ಯಚಟುವಟಿಕೆಗಳ ಮೇಲೆ ಭರಿಸಲಾದ ಮೊತ್ತವು ಅತ್ಯಲ್ಪ ಪ್ರಮಾಣದಿಂದ ಕೂಡಿದ್ದಿತು. ಇದು ಸಂಪರ್ಕ ರಸ್ತೆಗಳು, ಸೂಚನಾ ಫಲಕಗಳು, ಶೌಚಾಲಯಗಳು, ಇತ್ಯಾದಿ ಸಾರ್ವಜನಿಕ ಅನುಕೂಲತೆಗಳ ಕೊರತೆಯಲ್ಲಿ ಪರಿಣಮಿಸಿದ್ದಿತು. ಮುಂದುವರೆದು ಪ್ರಚಾರ ಚಟುವಟಿಕೆಗಳು ಸೀಮಿತ ಪ್ರಮಾಣದಲ್ಲಿದ್ದವು ಹಾಗೂ ಗಮನಾರ್ಹವಾದ ಪ್ರಕಟಣೆಗಳನ್ನು ಬಿಡುಗಡೆಗೊಳಿಸದೆಯೇ ದಾಸ್ತಾನಿನಲ್ಲಿ ಇಡಲಾಗಿದ್ದಿತು.

***ಸಂರಕ್ಷಣೆ***

**4.1** ಸಂರಕ್ಷಣೆಯು ಅದರ ಸ್ಥಿತಿಗತಿಗಳನ್ನು ಒಳಗೊಂಡಂತೆ ಒಂದು ಸ್ಮಾರಕವನ್ನು ಯಥಾಸ್ಥಿತಿಯಲ್ಲಿ ನಿರ್ವಹಿಸಿಕೊಂಡು ಹೋಗುವುದು ಹಾಗೂ ಉದ್ದೇಶಪೂರ್ವಕವಾದಂತಹ ಮಾನವ ಮಧ್ಯಸ್ಥಿಕೆಗಳ ಮೂಲಕ ಅಥವಾ ಸವೆತದ ಪ್ರಾಕೃತಿಕ ಅಂಶಗಳ ಕ್ರಿಯೆಗಳ ಕಾರಣದಿಂದ ಯಾವುದೇ ಬದಲಾವಣೆಗಳು ಅಥವಾ ಮಾರ್ಪಾಡುಗಳಿಗೆ ಅವಕಾಶ ಮಾಡಿಕೊಡದಿರುವುದು. ಸಂರಕ್ಷಣೆಯು ಸ್ಮಾರಕದ ಭೌತಿಕ ವಿನ್ಯಾಸ ಮತ್ತು ಸ್ಥಿರತೆಯ ಮೂಲಕ ಅದರ ಪುರಾತತ್ವಶಾಸ್ತ್ರೀಯ ಹಾಗೂ ವಾಸ್ತುಶಿಲ್ಪ ಮೌಲ್ಯದ ರೂಪದಲ್ಲಿ, ಅದರ ಐತಿಹಾಸಿಕ ಪ್ರಾಮುಖ್ಯತೆ ಹಾಗೂ ಸಾಂಸ್ಕೃತಿಕ ಅಥವಾ ಅಘೋಚರ ಸಹಭಾಗಿಗಳ ರೂಪದಲ್ಲಿ ಸಂರಕ್ಷಿಸುವುದಾಗಿರುತ್ತದೆ.

ಈ ಪಾರಂಪರಿಕ ಆಸ್ತಿಗಳು ನಮ್ಮ ಪುರಾತನ ಸಂಪ್ರದಾಯಗಳ ಜೀವಿತ ಸಾಕ್ಷ್ಯಾಧಾರಗಳಾಗಿರುವುದರಿಂದ ಅವುಗಳ ಸಂರಕ್ಷಣೆಯು ರಾಜ್ಯದ ಜವಾಬ್ದಾರಿಯಾಗಿರುತ್ತದೆ. ಇಲಾಖೆಯು ತನ್ನ ಪ್ರಾಚೀನ ಸ್ಮಾರಕಗಳು / ಸಂಪನ್ಮೂಲಗಳು ಹಾಗೂ ಪ್ರಾಚೀನ ಅವಶೇಷಗಳ ರಕ್ಷಣೆ ಕಾಪಾಡಿಕೊಂಡು ಹೋಗುವಿಕೆ ಮತ್ತು ಸುರಕ್ಷತೆಯ ಮೂಲ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳು (ಅಧಿನಿಯಮ) 1961 ಹಾಗೂ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳು ನಿಯಮಗಳ, 1965ರ ಅನುವುಗಳ ಅಡಿಯಲ್ಲಿ ಕಾನೂನಾತ್ಮಕ ಮತ್ತು ನಿಯಂತ್ರಕ ಅಧಿಕಾರಗಳನ್ನು ಹೊಂದಿರುವುದು.



**ಛಾಯಾಚಿತ್ರ ಸಂಖ್ಯೆ 4.1: 10ನೇ ಶತಮಾನದಲ್ಲಿ ಚಾಲುಕ್ಯರು ನಿರ್ಮಿಸಿರುವ ಬಸವಕಲ್ಯಾಣದ ಕೋಟೆಯ ನಿಕೃಷ್ಟ ಮಟ್ಟದ ನಿರ್ವಹಣೆ**

***ಸಂರಕ್ಷಣಾ ಕಾಮಗಾರಿಗಳಿಗಾಗಿ ಮಾರ್ಗಸೂಚಿಗಳು / ರಾಜ್ಯ ಕಾರ್ಯನೀತಿಯನ್ನು ರೂಪಿಸದಿರುವುದು***

**4.2** ಇಲಾಖೆಯು ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂರಕ್ಷಣಾ ಕಾಮಗಾರಿಗಳನ್ನು ನಡೆಸಿಕೊಂಡು ಹೋಗುವಸಲುವಾಗಿ ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳನ್ನು ಹೊಂದಿರಲಿಲ್ಲ ಹಾಗೂ ಅದರ ಅನುಪಸ್ಥಿತಿಯಲ್ಲಿ ರಾಜ್ಯವು ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳು ಅಧಿನಿಯಮ 1958ರೊಂದಿಗೆ ಸಂರಕ್ಷಣೆಯ ಮೇಲಿನ ರಾಷ್ಟ್ರೀಯ ಕಾರ್ಯನೀತಿ ಹಾಗೂ ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಸಾಂಸ್ಕೃತಿಕ ಮಂತ್ರಾಲಯದ ಮೂಲಕ ಪ್ರಕಟಿಸಿರುವಂತಹ ಸಂರಕ್ಷಣೆಯ ಮೇಲಿನ ಭಾರತೀಯ ಪುರಾತತ್ವ ಸ್ಮಾರಕಗಳ ಸಂಶೋಧನಾ ಸಂಸ್ಥೆಯ ಕೈಪಿಡಿಯನ್ನು ಅಳವಡಿಸಿಕೊಂಡಿರುವುದು. ಈ ಮಾರ್ಗಸೂಚಿಗಳಿಗೆ ಬದ್ಧತೆಯನ್ನು ಹೊಂದಿರುವಲ್ಲಿ ಲೆಕ್ಕಪರಿಶೋಧನೆಯು ಕೆಲವು ಲೋಪದೋಷಗಳನ್ನು ಗಮನಿಸಿತು, ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿರುವುದು.


***ಸ್ಮಾರಕಗಳ ನಿಯತಕಾಲಿಕ ಪರೀಕ್ಷಣೆಗಳ ವಾರ್ಷಿಕ ಭೌತಿಕ ಪರೀಕ್ಷಣಾ ರಿಜಿಸ್ಟರನ್ನು ನಿರ್ವಹಿಸದಿದ್ದುದು***

**4.3** ಪ್ರಾಚೀನ ಸ್ಮಾರಕಗಳು, ಪುರಾತತ್ವ ಶಾಸ್ತ್ರೀಯ ನಿವೇಶನಗಳು ಹಾಗೂ ಪಳೆಯುಳಿಕೆಗಳ ಸಂರಕ್ಷಣೆಗಾಗಿನ ರಾಷ್ಟ್ರೀಯ ಕಾರ್ಯನೀತಿಯ ಕಲಂ 4.05ರ ಅನುಸಾರ ಪುರಾತತ್ವ ಶಾಸ್ತ್ರೀಯ ಅಧಿಕಾರಿಗಳು ಒಂದು ಸ್ಮಾರಕದ ಸ್ಥಿತಿಗತಿಯನ್ನು ಪರಿಶೀಲಿಸುವ ಸಲುವಾಗಿ ಕಡೆಯ ಪಕ್ಷ ವರ್ಷದಲ್ಲಿ ಒಂದು ಸಲ ನಿಯತ ಪರೀಕ್ಷಣೆಯನ್ನು ನಡೆಸತಕ್ಕದು ಹಾಗೂ ಪರೀಕ್ಷಣಾ ಟಿಪ್ಪಣಿಗಳನ್ನು ತಯಾರಿಸಬೇಕು. ಇದು ಅಗತ್ಯ ಸಂರಕ್ಷಣಾ ಕಾರ್ಯಕ್ರಮ ಅಥವಾ ಪೂರ್ವಭಾವಿ ಯೋಜನೆಯನ್ನು ತಯಾರಿಸುವಲ್ಲಿ ಸಹಾಯಕವಾಗುವುದು.

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಇಲಾಖೆಯು ಭೌತಿಕ ಪರೀಕ್ಷಣೆಗಳಿಗಾಗಿ ಹಾಗೂ ವ್ಯಾಪಿಸಬೇಕಾದಂತಹ ಸ್ಮಾರಕಗಳ ಮಾದರಿಗಳಿಗಾಗಿ ಯಾವುದೇ ಗುರಿಗಳನ್ನು ನಿಗದಿಪಡಿಸಿರಲಿಲ್ಲ. ಆಯುಕ್ತರವರು 2017–18 ಮತ್ತು 2019–20 ರಿಂದ 2021–22ರಲ್ಲಿ 50 ಪರೀಕ್ಷಣೆಗಳನ್ನು ಕೈಗೊಂಡಿದ್ದರು ಹಾಗೂ 2018–19ರಲ್ಲಿ ಯಾವುದೇ ಪರೀಕ್ಷಣೆಯನ್ನು ನಡೆಸಿರಲಿಲ್ಲ. ಮುಂದುವರೆದು ಪರೀಕ್ಷಣೆಗಳನ್ನು ಇಲಾಖೆಯು ಸಂರಕ್ಷಣಾ ಕಾಮಗಾರಿಗಳನ್ನು ಈಗಾಗಲೇ ಕೈಗೆತ್ತಿಕೊಂಡಿರುವಂತಹ ಸ್ಥಳಗಳಿಗೆ ಮಾತ್ರ ಸೀಮಿತಗೊಳಿಸಲಾಗಿದ್ದಿತು.

- ಸಂರಕ್ಷಿತ ಸ್ಮಾರಕಗಳ ಸ್ಥಿತಿಗತಿ, ಚರ್ಚೆಗಳ ವಿವರಗಳು, ಭವಿಷ್ಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪೂರ್ವಭಾವಿ ಯೋಜನೆ ಇತ್ಯಾದಿ ವಿವರಗಳನ್ನು ದಾಖಲಿಸಿರಲಿಲ್ಲ ಹಾಗೂ ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಅಂತಹ ವಿವರಗಳ ಅನುಪಸ್ಥಿತಿಯಲ್ಲಿ 50 ಪರೀಕ್ಷಣೆಗಳ ಮೇಲೆ ತೆಗೆದುಕೊಳ್ಳಲಾದಂತಹ ಅನುಸರಣಾ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.




**ಛಾಯಾಚಿತ್ರ ಸಂಖ್ಯೆ. 4.2: ಇಲಾಖೆಯು ನಿಯತಕಾಲಿಕ ಪರೀಕ್ಷಣೆಗಳನ್ನು ನಡೆಸದಿದ್ದುದು ಸ್ಥಳೀಯರು ಒಂದು ಸ್ಮಾರಕದ ಒಳಗೆ ಕೊಠಡಿಗಳನ್ನು ನಿರ್ಮಿಸುವಲ್ಲಿ ಪರಿಣಮಿಸಿದ್ದುದು.**

ವಾರ್ಷಿಕ ಭೌತಿಕ ಪರಿಶೀಲನೆಯ ಅನುಪಸ್ಥಿತಿಯಲ್ಲಿ, ಪ್ರವಾಸಿಗರನ್ನು ಆಕರ್ಷಿಸುವ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಜಲದುರ್ಗ ಕೋಟೆಯಂತಹ ಸ್ಥಳಗಳಲ್ಲಿ ಸಂರಕ್ಷಣಾ ಕಾರ್ಯಗಳಿಗೆ ಇಲಾಖೆ ಆದ್ಯತೆ ನೀಡಿರಲಿಲ್ಲ. ಪ್ರವಾಸಿಗರ ಒಳಹರಿವನ್ನು ಪರಿಗಣಿಸಿ, ಪ್ರವಾಸೋದ್ಯಮ ಇಲಾಖೆ ಸಾರ್ವಜನಿಕ ಸೌಲಭ್ಯಗಳಾದ ಉದ್ಯಾನವನ, ಹೈಟೆಕ್ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಿದೆ.



**ಛಾಯಾಚಿತ್ರ ಸಂಖ್ಯೆ. 4.3: ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಜಲದುರ್ಗ ಕೋಟೆಯಲ್ಲಿ ಸಂರಕ್ಷಣಾ ಕಾಮಗಾರಿಗಳಿಗೆ ಆದ್ಯತೆಯನ್ನು ನೀಡದಿರುವುದು.**




**ಛಾಯಾಚಿತ್ರ ಸಂಖ್ಯೆ. 4.4: ಪುರಾತತ್ವ ಇಲಾಖೆಯು ಕ್ರಮವನ್ನು ತೆಗೆದುಕೊಳ್ಳದಿದ್ದ ಕಾರಣ ಪ್ರವಾಸೋದ್ಯಮ ಇಲಾಖೆಯು ಪ್ರವಾಸಿಗರ ಒಳಹರಿವನ್ನು ಪರಿಗಣಿಸಿದಂತೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಜಲದುರ್ಗ ಕೋಟೆಯ ಸಮೀಪ ಉದ್ಯಾನವನ, ಅತ್ಯುನ್ನತ ಶ್ರೇಣಿಯ ಶೌಚಾಲಯಗಳು ಮತ್ತು ನೀರಿನ ಅನುಕೂಲತೆಗಳನ್ನು ಒದಗಿಸಿರುವುದು**

**10 ಸ್ಥಳಗಳು**

**17 ಸ್ಥಳಗಳು**

**ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ತೋರಿಸುವ ವಿಡಿಯೋವನ್ನು ವೀಕ್ಷಿಸಲು ಮೇಲಿನ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ**

71 ಸ್ಮಾರಕಗಳ ಜಂಟಿ ಭೌತಿಕ ಪರೀಕ್ಷಣೆಯ ವೇಳೆಯಲ್ಲಿ 10 ಸ್ಥಳಗಳಲ್ಲಿ ಸಂರಕ್ಷಿತ ಸ್ಮಾರಕಗಳ ಮೇಲೆ ಹೊಸ ನಿರ್ಮಾಣಗಳನ್ನು ನಿರ್ಮಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಐತಿಹಾಸಿಕ ಮೌಲ್ಯದಲಿನ ನಷ್ಟದಲ್ಲಿ ಪರಿಣಮಿಸಿದ್ದಿತು. 17 ಸ್ಥಳಗಳಲ್ಲಿ ***ಅನುಬಂಧ 2ರಲ್ಲಿ*** ವಿವರಿಸಿದಂತೆ ಗ್ರಾನೈಟು ಸ್ಲ್ಯಾಬುಗಳನ್ನು, ಟೈಲುಗಳನ್ನು ಸ್ಮಾರಕಗಳ ಒಳಗೆ ಮತ್ತು ಸುತ್ತಮುತ್ತಲು ಅಳವಡಿಸಲಾಗಿದ್ದಿತು. ಹಾಗೂ ಸಂಪೂರ್ಣ ನಿರ್ಮಾಣಕ್ಕೆ ಬಣ್ಣವನ್ನು ಬಳಿಯಲಾಗಿದ್ದಿತು ಹಾಗೂ ಸಿಮೆಂಟನ್ನು ಉಪಯೋಗಿಸಲಾಗಿದ್ದಿತು. ಮುಂದುವರೆದು ಒತ್ತುವರಿಗಳು ಅನಧಿಕೃತ ನಿರ್ಮಾಣಗಳು ಹಾಗೂ

ಅವುಗಳನ್ನು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿದ್ದಿತೋ ಅದನ್ನು ಹೊರತುಪಡಿಸಿದಂತೆ ಇತರೆ ಉದ್ದೇಶಗಳಿಗಾಗಿ ಸ್ಮಾರಕಗಳ ಬಳಕೆಯ 39 ಪ್ರಕರಣಗಳನ್ನು ***ಅನುಬಂಧ 3ರಲ್ಲಿ*** ವಿವರಿಸಿರುವಂತೆ ಗಮನಿಸಲಾಯಿತು.




**ಛಾಯಾಚಿತ್ರ ಸಂಖ್ಯೆ. 4.5: ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಬಣ್ಣ ಬಳಿದಿರುವ ಕಾರಣ ಪುರಾತತ್ವ ಶಾಸ್ತ್ರೀಯ ಮೌಲ್ಯವು ಕಳೆದು ಹೋಗಿರುವುದು.**




**ಛಾಯಾಚಿತ್ರ ಸಂಖ್ಯೆ. 4.6: ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಸೀಮಾ ಗೋಡೆಯ ಹೊರಗೆ ಇರಿಸಲಾಗಿರುವ ಸುಣ್ಣ ಬಳಿದಿರುವ ಶಿಲಾಶಾಸನದೊಂದಿಗೆ ಕಲ್ಲು.**

ಈ ರೀತಿಯಾಗಿ ನಿಯತಕಾಲಿಕ ಪರೀಕ್ಷಣೆಗಳಿಗಾಗಿ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸುವಲ್ಲಿ ಇಲಾಖೆಯ ವಿಫಲತೆ ಹಾಗೂ ಮೇಲ್ವಿಚಾರಣೆಯಲ್ಲಿನ ಕೊರತೆಯು ಸಂರಕ್ಷಿತ ಸ್ಮಾರಕಗಳನ್ನು ನಿರ್ವಹಿಸಿಕೊಂಡು ಹೋಗದಿರುವಲ್ಲಿ ಪರಿಣಮಿಸಿತು ಹಾಗೂ ಅವುಗಳ ಐತಿಹಾಸಿಕ ಮೌಲ್ಯದ ಮೇಲೆ ಪರಿಣಾಮವನ್ನುಂಟು ಮಾಡಿತು.

ಪರೀಕ್ಷಣೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಒಂದು ಕಾಲಮಿತಿಯನ್ನು ನಿರ್ದಿಷ್ಟಪಡಿಸಲಾಗಿರುವುದು. ಹಾಗೂ ವಾರ್ಷಿಕ ಭೌತಿಕ ಪರೀಕ್ಷಣೆಗಾಗಿ ಒಂದು ರಿಜಿಸ್ಟರಿನ ನಿರ್ವಹಣೆಯನ್ನು ನಿರ್ದಿಷ್ಟಪಡಿಸಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ಮುಂದುವರೆದು ಗ್ರಾನೈಟು, ಟೈಲುಗಳನ್ನು ಅಳವಡಿಸುವುದು ಹಾಗೂ ಗೋಡೆಗಳಿಗೆ ಬಣ್ಣ ಬಳಿಯುವುದರ ಮೂಲಕ ಸ್ಮಾರಕಗಳ ಸೌಂದರ್ಯತೆಯನ್ನು ಹಾಳು ಮಾಡದಂತೆ ಎಲ್ಲಾ ದೇವಸ್ಥಾನಗಳ ಅಧಿಕಾರಿಗಳು ಮತ್ತು ಸಮಿತಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡುವಂತೆ ಮುಜರಾಯಿ ಇಲಾಖೆಯ ಆಯುಕ್ತರವರಿಗೆ ಪತ್ರವನ್ನು ಬರೆಯಲಾಗಿರುವುದು ಎಂಬುದಾಗಿಯು ಇಲಾಖೆಯು ತಿಳಿಸಿತು. ಆದಾಗ್ಯೂ, ಸಂರಕ್ಷಿತ ಸ್ಮಾರಕಗಳಿಗೆ ಶಾಶ್ವತ ಹಾನಿಯನ್ನು ಮುಂಗಾಣುವಲ್ಲಿ ಮತ್ತು ತಡೆಗಟ್ಟುವಲ್ಲಿ ಇಲಾಖೆ ವಿಫಲವಾಗಿವಾಗಿದ್ದಿತು..

**ಶಿಫಾರಸ್ಸು 7:**

**ಸ್ಮಾರಕಗಳ ನಿಯತಕಾಲಿಕ ಪರಿಶೀಲನೆಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ರೂಪಿಸಲು ಕ್ರಮ ಕೈಗೊಂಡು ಅಧಿಕಾರಿಗಳಿಗೆ ತಕ್ಕುದಾದ ರೀತಿಯಲ್ಲಿ ಗುರಿಗಳನ್ನು ನಿಗದಿಪಡಿಸುವ ಮೂಲಕ ಅನುಸರಣಾ ಕ್ರಮವನ್ನು ದಾಖಲಿಸಿ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯತೆ ಇರುವುದು.**

***ಸ್ಮಾರಕಗಳ ಸಂರಕ್ಷಣೆ***

**4.4** ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ *ಕಲಂ 3.01ರಲ್ಲಿ* ತಿಳಿಸಿರುವಂತೆ, ಸಂರಕ್ಷಣಾ ಕಾರ್ಯಚಟುವಟಿಕೆಗಳು ಮಾನವ ಮಧ್ಯಸ್ಥಿಕೆಗಳ ಕಾರಣದಿಂದ ಉಂಟಾಗುವ ಸ್ಮಾರಕಗಳ ಹಾನಿ ಮತ್ತು

ದುಃಸ್ಥಿತಿಯನ್ನು ತಡೆಯತಕ್ಕದ್ದು. ಇದನ್ನು ಸಮರ್ಪಕವಾದಂತಹ ಸಂಖ್ಯೆಯ ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯನ್ನು ಒದಗಿಸುವ ಮೂಲಕ ಹಾಗೂ ಸಂರಕ್ಷಿತ ಸ್ಮಾರಕಗಳಲ್ಲಿ ತಾಂತ್ರಿಕ ಪರಿಹಾರಕಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರಿಣಾಮಕಾರಿತ್ವದಿಂದ ಮಾಡಬಹುದು.

**ಪುರಾತತ್ವ ಸ್ಮಾರಕಗಳಲ್ಲಿ ಅಸಮರ್ಪಕವಾದಂತಹ ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯ ಅನುಕೂಲತೆಗಳು**

**4.4.1** ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಎಲ್ಲಾ 71 ಸ್ಥಳಗಳಲ್ಲಿ ಇಲಾಖೆಯು ತನ್ನದೇ ಆದಂತಹ ಸ್ವಂತ ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯನ್ನು ಒದಗಿಸುವಲ್ಲಿ ವಿಫಲಗೊಂಡಿದ್ದಿತು. ಏಳು ಸ್ಥಳಗಳಲ್ಲಿ[17] ರಾಜ್ಯ ಪ್ರವಾಸೋದ್ಯಮ ಇಲಾಖೆ /ಸ್ಥಳೀಯ ಸಮೂದಾಯಗಳು ಭದ್ರತೆಯನ್ನು ಒದಗಿಸಿದ್ದವು.

ಮಾರ್ಚ್–2022ರಲ್ಲಿಂದಂತೆ ಇಲಾಖೆಯು ಅನುಮೋದನೆಗೊಂಡಿದ್ದಂತಹ 30ಕ್ಕೆ ಪ್ರತಿಯಾಗಿ ತನ್ನ ವೇತನ ಪಟ್ಟಿಗಳಲ್ಲಿ ಕೇವಲ 6 ಚೌಕಿದಾರರುಗಳನ್ನು ಹೊಂದಿದ್ದಿತು *(ಶೇಕಡ 20)* ಆಗಸ್ಟ್ 2019ರಲ್ಲಿ ಇಲಾಖೆಯು ಖಾಲಿ ಹುದ್ದೆಗಳ ಪ್ರತಿಯಾಗಿ 74 'ಡಿ' ಗುಂಪಿನ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡಿತು (24 ಚೌಕಿದಾರರುಗಳು ಮತ್ತು 50 'ಡಿ' ಗುಂಪಿನ ಸಿಬ್ಬಂದಿಗಳು). ಆದಾಗ್ಯೂ, ಇದು ಅಧಿಸೂಚಿತ ಸಂರಕ್ಷಿತ ಸ್ಮಾರಕಗಳ ಸಂಖ್ಯೆಗೆ (844) ಪ್ರಮಾಣಾನುಗುಣವಾಗಿ ಆಗಿರಲಿಲ್ಲ.




**ಛಾಯಾಚಿತ್ರ ಸಂಖ್ಯೆ 4.7: ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯ ಅನುಪಸ್ಥಿತಿಯ ಕಾರಣ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಹುಲ್ಲೇಕೆರೆ ಚನ್ನಕೇಶವ ದೇವಸ್ಥಾನದಲ್ಲಿ ಪ್ರಾಚೀನ ಸ್ಮಾರಕದ ಮೇಲೆ ಮಾನವನ ಮಧ್ಯಸ್ಥಿಕೆ**

ಮೇಲಿನದೇ ರೀತಿಯ ಕಂಡಿಕೆಗೆ[18], ಕರ್ನಾಟಕ ಸರ್ಕಾರವು ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯ ಸಂಖ್ಯೆಯನ್ನು ಹಣಕಾಸು ಇಲಾಖೆಯ ಅನುಮೋದನೆಯೊಂದಿಗೆ ಹೆಚ್ಚಳಗೊಳಿಸಲಾಗುವುದು ಎಂಬುದಾಗಿ ತಿಳಿಸಿದ್ದಿತು (ಡಿಸೆಂಬರ್–2011). ಆದಾಗ್ಯೂ, ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಳಗೊಳಿಸುವ ಸಲುವಾಗಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ.

ಭದ್ರತಾ ಸಿಬ್ಬಂದಿಯ ಅನುಪಸ್ಥಿತಿಯಲ್ಲಿ ಸಾರ್ವಜನಿಕರು ಪ್ರಾಚೀನ ಸ್ಮಾರಕಗಳನ್ನು ಹಾಳು ಮಾಡಿದ್ದರು ಹಾಗೂ ದುರುಪಯೋಗಪಡಿಸಿಕೊಂಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು


[17] ಶ್ರೀ ಅರ್ಕೇಶ್ವರ ಸ್ವಾಮಿ ದೇವಸ್ಥಾನ, ಕೆ.ಆರ್.ನಗರ, ಶ್ರೀ ಪ್ರಸನ್ನ ಕೃಷ್ಣ ಸ್ವಾಮಿ ದೇವಸ್ಥಾನ, ಮೈಸೂರು ಅರಮನೆ, ಶ್ರೀ ಗುಂಜನರಸಿಂಹಸ್ವಾಮಿ ದೇವಸ್ಥಾನ, ಟಿ. ನರಸೀಪುರ, ಶ್ರೀ ಅಪ್ರಮೇಯ ಸ್ವಾಮಿ ದೇವಸ್ಥಾನ, ಚೆನ್ನಪಟ್ಟಣ, ಹಜರತ್ ಖ್ವಾಜಾ ಬಂಡೆ ನವಾಝ್‌ರವರ ದರ್ಗಾ, ಕಲಬುರಗಿ, ರಾಣಿ ಚೆನ್ನಮ್ಮ ಅರಮನೆ, ಕಿತ್ತೂರು ಹಾಗೂ ಶ್ರೀ ಮಾರುತಿ ಕಾಂತೇಶ ದೇವಸ್ಥಾನ, ಕದರಮಂಡಲಗಿ.

[18] 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ಸಾಲಿಗೆ ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ವರದಿ ಸಂಖ್ಯೆ 2ರ (ಸಿವಿಲ್) ***ಕಂಡಿಕೆ 2.3.9.4.***

ಈ ಕೆಳಗಿನ ಛಾಯಾಚಿತ್ರಗಳಲ್ಲಿ ತೋರಿಸಿರುವಂತೆ (ಕೆಲವು ಪ್ರಕರಣಗಳು) ಖಾಯಂ ಹಾನಿಗಳಲ್ಲಿ ಪರಿಣಮಿಸಿದ್ದಿತು.




**ಛಾಯಾಚಿತ್ರ ಸಂಖ್ಯೆ. 4.8 : ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರಿನಲ್ಲಿ ಹನುಮಾನ್ ದೇವಸ್ಥಾನದಲ್ಲಿ ಕಸವನ್ನು ಚೆಲ್ಲಾಪಿಲ್ಲಿಯಾಗಿ ಎಸೆದಿರುವುದು.**




**ಛಾಯಾಚಿತ್ರ ಸಂಖ್ಯೆ. 4.9 : ಮೈಸೂರು ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕಿನ ಚಿಕ್ಕ ಹನಸೋಗೆಯಲ್ಲಿ ಆದಿನಾಥ ಬಸದಿಯಲ್ಲಿ ಸ್ಥಳೀಯರಿಂದ ಬಟ್ಟೆಗಳನ್ನು ಒಣಗಿಸಲು ಪುರಾತತ್ವ ನಿವೇಶನಗಳ ಬಳಕೆ.**

ಚೌಕಿದಾರರುಗಳ ಮಂಜೂರಾತಿಗೊಂಡಿರುವ ಸಂಖ್ಯೆಯನ್ನು ಅಗತ್ಯ ಹಣಕಾಸಿನೊಂದಿಗೆ ಹೆಚ್ಚಳಗೊಳಿಸಿಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂಬುದಾಗಿ ಇಲಾಖೆಯು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಕ್ಕೆ ತನ್ನ ಉತ್ತರವನ್ನು ನೀಡುವ ವೇಳೆಯಲ್ಲಿ (ಜುಲೈ–2023) ತಿಳಿಸಿತು. ಸರ್ಕಾರವು ತನ್ನ ಉತ್ತರದಲ್ಲಿ (ಆಗಸ್ಟ್ 2023) ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು. ಈ ಉತ್ತರವು ಸರ್ಕಾರವು ನೀಡಿದ ಹಿಂದಿನ ಆಶ್ವಾಸನೆಗಳಂತೆಯೇ (2011) ಇದ್ದು, 12 ವರ್ಷಗಳು ಕಳೆದರೂ ಇನ್ನು ಕಾರ್ಯಗತಗೊಳಿಸಿರಲಿಲ್ಲ

**ಸಂರಕ್ಷಣಾ ನೋಟೀಸು ಫಲಕಗಳನ್ನು ಹಾಕುವಲ್ಲಿನ ವಿಫಲತೆ**

**4.4.2** ಅಧಿನಿಯಮದ ಪರಿಚ್ಛೇದ 3ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕಗಳು ಪ್ರಾಚೀನ / ಐತಿಹಾಸಿಕ ಸ್ಮಾರಕಗಳು / ಪುರಾತತ್ವಶಾಸ್ತ್ರೀಯ ನಿವೇಶನಗಳು ಹಾಗೂ ಸಂರಕ್ಷಿತ ಸ್ಮಾರಕಗಳು ಎಂಬುದಾಗಿ ಭಾವಿಸಲ್ಪಡುವ ಪಳೆಯುಳಿಕೆಗಳು ಹಾಗೂ ಪ್ರದೇಶಗಳು ಹಾಗೂ ಅಲ್ಲದೆಯೇ ಅಧಿನಿಯಮದ *ಪರಿಚ್ಛೇದ 4ರ* ಅಡಿಯಲ್ಲಿ ಪ್ರದತ್ತವಾಗಿರುವಂತಹ ಅಧಿಕಾರಗಳ ಒಳಗೇ ಸರ್ಕಾರದಿಂದ ಸಂರಕ್ಷಿತ ಸ್ಮಾರಕಗಳು ಎಂಬುದಾಗಿ ತದನಂತರದಲ್ಲಿ ಘೋಷಿಸಲ್ಪಟ್ಟಿರುವಂತಹ ಪ್ರಾಚೀನ ಸ್ಮಾರಕಗಳನ್ನೂ ಒಳಗೊಂಡಿರುತ್ತವೆ. ಒಂದು ಸಂರಕ್ಷಿತ ಸ್ಮಾರಕವನ್ನು ಯಾರೇ ಆಗಿರಲಿ ಹಾಳು ಮಾಡಿದಲ್ಲಿ, ತೆಗೆದುಹಾಕಿದಲ್ಲಿ, ಹಾನಿಮಾಡಿದಲ್ಲಿ,




**ಛಾಯಾಚಿತ್ರ ಸಂಖ್ಯೆ. 4.10: ಬೆಳಗಾವಿ ಜಿಲ್ಲೆಯ ಕಿತ್ತೂರು ಕೋಟೆಯ ರಾಣಿ ಚನ್ನಮ್ಮ ಅರಮನೆಯಲ್ಲಿನ ಸಂರಕ್ಷಣಾ ನೋಟೀಸು ಫಲಕ**

ಬದಲಾಯಿಸಿದ್ದಲ್ಲಿ, ವಿಕೃತಗೊಳಿಸಿದ್ದಲ್ಲಿ, ಅಪಾಯಕ್ಕೆ ದೂಡಿದಲ್ಲಿ ಅಥವಾ ದುರುಪಯೋಗಪಡಿಸಿಕೊಂಡಲ್ಲಿ ಅಧಿನಿಯಮದ *ಪರಿಚ್ಛೇದ 26(1)(i)ರ* ಅಡಿಯಲ್ಲಿ ಮೂರು ತಿಂಗಳುಗಳವರೆವಿಗೂ ವಿಸ್ತರಿಸಬಹುದಾದ ಜೈಲು ಶಿಕ್ಷೆಯೊಂದಿಗೆ ಅಥವಾ ಎರಡು ಸಾವಿರ ರೂಪಾಯಿಗಳವರೆಗೂ ವಿಸ್ತರಿಸಬಹುದಾದ ದಂಡದೊಂದಿಗೆ ಅಥವಾ ಇವೆರಡರೊಂದಿಗೆ ಶಿಕ್ಷೆಗೆ ಅರ್ಹರಾಗಿರುತ್ತಾರೆ.

ಸ್ಮಾರಕಗಳ ಜಂಟಿ ಪರೀಕ್ಷಣೆಯ ವೇಳೆಯಲ್ಲಿ, 71 ಸ್ಥಳಗಳ ಪೈಕಿ 52 ಸ್ಥಳಗಳಲ್ಲಿ *(ಶೇಕಡ 73)* ದ್ವಿಭಾಷಾ ಸಂರಕ್ಷಣಾ ಸೂಚನಾ ಫಲಕಗಳು (ರಕ್ಷಿತ ಸ್ಮಾರಕದ ಸ್ಥಿತಿಯನ್ನು ಪ್ರದರ್ಶಿಸುವುದು ಮತ್ತು ಕಾಯಿದೆಯ ಸೆಕ್ಷನ್ 26(1)(i) ಅಡಿಯಲ್ಲಿ ಶಾಸನಬದ್ಧ ಎಚ್ಚರಿಕೆ) ಕಂಡುಬಂದಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ (ವಿವರಗಳು ***ಅನುಬಂಧ 4ರಲ್ಲಿ).*** ಸಂರಕ್ಷಣೆಗಾಗಿ ನೋಟೀಸು ಫಲಕಗಳನ್ನು ಹಾಕುವಲ್ಲಿನ ವಿಫಲತೆಯು ಸಮರ್ಥನೀಯವಲ್ಲದ ಹಾಳುಮಾಡುವಿಕೆ, ಒತ್ತುವರಿ ಇತ್ಯಾದಿಗಳಲ್ಲಿ ಪರಿಣಮಿಸಬಹುದು.

ಸರ್ಕಾರವು ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಸಂರಕ್ಷಣಾ ನೋಟೀಸುಗಳನ್ನು ಎರಡು ಭಾಷೆಗಳಲ್ಲಿ ಪ್ರದರ್ಶಿಸಿರುವುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ಆಯವ್ಯಯ ಹಂಚಿಕೆಯನ್ನು ಪರಿಗಣಿಸಿದಂತೆ ಕಲಬುರಗಿ ಮತು ಬೆಳಗಾವಿ ವಿಭಾಗಗಳಲ್ಲಿ ಫಲಕಗಳನ್ನು ಪ್ರದರ್ಶಿಸಲಾಗುವುದು. ಈ ಫಲಕಗಳು ಕನಿಷ್ಠ ಪ್ರತಿಬಂಧಕವಾಗಿರುವುದರಿಂದ ಮತ್ತು ಸ್ಮಾರಕಗಳನ್ನು ಹಾಳು ಮಾಡದಿರುವ ಅಗತ್ಯವನ್ನು ಸಾರ್ವಜನಿಕರಿಗೆ ಎತ್ತಿ ತೋರಿಸುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

**ಪ್ರಾಚೀನ ಸ್ಮಾರಕಗಳ ನಿವೇಶನಗಳಲ್ಲಿ ಅಸಮರ್ಪಕ ಸಂರಕ್ಷಣಾ ಕ್ರಮಗಳು**

**4.4.3** ನಿಗಾವಣೆ ಮತ್ತು ಸುರಕ್ಷತಾ ಕರ್ತವ್ಯಗಳಿಗಾಗಿ ಭದ್ರತಾ ಸಿಬ್ಬಂದಿಯ ಕೊರತೆಯನ್ನು ಪರಿಗಣಿಸಿದಂತೆ ಇಲಾಖೆಯು ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗೆ ಸಹಾಯಕವಾಗುವಂತಹ ಮೂಲ ಸೌಕರ್ಯಗಳು ಮತ್ತು ತಾಂತ್ರಿಕ ಪರಿಹಾರಕಗಳನ್ನು ಉಪಯೋಗಿಸಿಕೊಳ್ಳುತ್ತದೆ ಎಂಬುದು ಆಜ್ಞಾರ್ಥಕವಾಗಿರುತ್ತದೆ.

ಇಲಾಖಾ ಅಧಿಕಾರಿಗಳು / ಸಿಬ್ಬಂದಿಯೊಂದಿಗೆ ಜಂಟಿಯಾಗಿ ಪರೀಕ್ಷಣೆ ಮಾಡಲಾದ 71 ಸ್ಥಳಗಳ ಪೈಕಿ 36 *(ಶೇಕಡ* 51) ***(ಅನುಬಂಧ 5)*** ಸ್ಥಳಗಳಲ್ಲಿ ಸ್ಮಾರಕಗಳು/ಶಿಲಾಶಾಸನಗಳನ್ನು ಕಾಂಪೌಂಡು ಗೋಡೆಗಳು/ ಸೀಮಾ ಬೇಲಿಗಳೊಂದಿಗೆ ಭದ್ರತೆಯಿಂದ ರಕ್ಷಿಸಿರಲಿಲ್ಲ. ಮುಂದುವರೆದು 9 (*ಶೇಕಡ* 13) ಸ್ಥಳಗಳು ಭಾಗಶಃವಾಗಿ ಮಾತ್ರ ಸುರಕ್ಷಿತವಾಗಿದ್ದವು ***(ಅನುಬಂಧ 6).***




**ಛಾಯಾಚಿತ್ರ 4.11: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಶ್ರೀ ಚನ್ನಕೇಶವ ದೇವಸ್ಥಾನಕ್ಕೆ ಕಾಂಪೌಂಡು ಗೋಡೆ ಹಾಕದಿರುವುದು.**




**ಛಾಯಾಚಿತ್ರ 4.12: ಕಲಬುರಗಿ ಜಿಲ್ಲೆಯ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಅಫ್ಜಲ್ ಖಾನ್ ಘೋರಿಯು ಭಾಗಶ:ವಾಗಿ ರಕ್ಷಿತವಾಗಿರುವುದು.**

71 ಸ್ಥಳಗಳ ಪೈಕಿ ಕೇವಲ 10 ಸ್ಥಳಗಳಲ್ಲಿ ಮಾತ್ರ ಸ್ಮಾರಕಗಳನ್ನು ನಿರ್ವಹಿಸುವ ಟ್ರಸ್ಟುಗಳಿಂದ/ ಸ್ಥಳೀಯ ಪ್ರಾಧಿಕಾರಗಳಿಂದ ಸಿಸಿ ಟಿವಿ ವ್ಯವಸ್ಥೆಯನ್ನು ಸ್ಥಾಪಿಸಲಾಗಿದ್ದಿತು. (***ಅನುಬಂಧ–7***) ಜಂಟಿ ಪರೀಕ್ಷಣೆಯ ವೇಳೆಯಲ್ಲಿ ನಂದಗಾವಿ ಮತ್ತು ಜಲದುರ್ಗ ಕೋಟೆಗಳಲ್ಲಿ ಅಪರಿಚಿತ ವ್ಯಕ್ತಿಗಳು ವಾಸವಾಗಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಸಂರಕ್ಷಣಾ ಕ್ರಮಗಳ ಅನುಪಸ್ಥಿತಿಯಲ್ಲಿ ಈ ನಿಟ್ಟಿನಲ್ಲಿ ಅತ್ಯಮೂಲ್ಯ ಶಿಲಾಶಾಸನಗಳ ಕಳ್ಳತನದ ಸಾದ್ಯತೆಯನ್ನು ಹಾಗೂ ಖಾಯಂ ಹಾನಿಯ (ಅಧಿಕೃತ ಶಿಲಾಶಾಸನಗಳು) ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.



**ಛಾಯಾಚಿತ್ರ 4.13: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಜಲದುರ್ಗ ಕೋಟೆಯಲ್ಲಿ ಅಪರಿಚಿತ ವ್ಯಕ್ತಿಗಳು ಅನಧಿಕೃತವಾಗಿ ವಾಸಿಸುತ್ತಿರುವುದು.**

**ಪ್ರಾಚೀನ ಸ್ಮಾರಕಗಳನ್ನು ಇತರೆ ಉದ್ದೇಶಗಳಿಗಾಗಿ ಉಪಯೋಗಿಸುತ್ತಿರುವುದು**

**4.4.4** ಈ ಅಧಿನಿಯಮದ ಅಡಿಯಲ್ಲಿ ನಿರ್ವಹಿಸಲ್ಪಡುತ್ತಿರುವ ಒಂದು ಸಂರಕ್ಷಿತ ಸ್ಮಾರಕವು ಪೂಜ್ಯ ಸ್ಥಳವಾಗಿದ್ದುದ್ದಲ್ಲಿ ಅಥವಾ ಪುಣ್ಯ ಕ್ಷೇತ್ರವಾಗಿದ್ದಲ್ಲಿ ಅದರ ವೈಲಕ್ಷಣಗಳಿಗೆ ಅಸಮಂಜಸವಾಗಿ/ವಿರುದ್ಧವಾಗಿ ಯಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ ಎಂಬುದಾಗಿ ಅಧಿನಿಯಮದ *ಪರಿಚ್ಛೇದ 16(1)* ತಿಳಿಸುತ್ತದೆ.

ಇಲಾಖೆಯು ತನ್ನ ಕಛೇರಿಗಳನ್ನು ಒಂದು ಸ್ಥಳದಲ್ಲಿ[19] ಹಾಗೂ ರಾಜ್ಯ ಮುಜರಾಯಿ ಇಲಾಖೆಯು / ಸ್ಥಳೀಯ ಟ್ರಸ್ಟುಗಳು ತಮ್ಮ ಆಡಳಿತಾತ್ಮಕ ಕಚೇರಿಗಳನ್ನು ಮೂರು ಸ್ಥಳಗಳಲ್ಲಿ[20] ಕಾರ್ಯಾಚರಣೆಗೊಳಿಸುತ್ತಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಾಸಂಗಿಕವಾಗಿ ಎರಡು ಮಾದರಿ ಆಯ್ಕೆ ಮಾಡಲಾಗಿದ್ದ ವಸ್ತುಸಂಗ್ರಹಾಲಯಗಳು ಸಂರಕ್ಷಿತ ಸ್ಮಾರಕಗಳಲ್ಲಿ ಅಂದರೆ ಕಲಬುರಗಿಯಲ್ಲಿ ಜೋಡಿ ಘೋರಿಗಳಲ್ಲಿ ಮತ್ತು ರಾಯಚೂರಿನ ನವರಂಗ್ ದರ್ವಾಜಾ ಕೋಟೆಯಲ್ಲಿ ಕಾರ್ಯಾಚರಣೆಗೊಳಿಸುತ್ತಿದ್ದವು ಎಂಬುದನ್ನು ಗಮನಿಸಲಾಯಿತು.

[19] ಇಲಾಖೆಯು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಿತ್ತೂರಿನಲ್ಲಿ ರಾಣಿ ಚೆನ್ನಮ್ಮ ಅರಮನೆಯ ಒಳಗೆ ಒಂದು ವಸ್ತು ಸಂಗ್ರಹಾಲಯ ಮತ್ತು ಒಂದು ಕಚೇರಿಯನ್ನು ನಡೆಸುತ್ತಿರುವುದು.

[20] ಬೆಂಗಳೂರಿನ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಮುಜರಾಯಿ ಇಲಾಖೆ, ಸವದತ್ತಿ ತಾಲ್ಲೂಕಿನ ಸಿರಸಂಗಿಯಲ್ಲಿ ಕಾಳಮ್ಮದೇವಿ ದೇವಸ್ಥಾನದಲ್ಲಿ ವ್ಯವಸ್ಥಾಪನೆಯ ಟ್ರಸ್ಟುಗಳು, ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಡರಮಂಡಲ್ಗಿಯಲ್ಲಿ ಲಿಖಿತ ಶಾಸನಗಳೊಂದಿಗೆ ಮಾರುತಿ ಕಾಂತೇಶ ದೇವಸ್ಥಾನ.




**ಛಾಯಾಚಿತ್ರ ಸಂಖ್ಯೆ 4.14: ಕಲಬುರಗಿ ಜಿಲ್ಲೆಯ ಜೋಡಿ ಘೋರಿಗಳಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯ ಕಛೇರಿ.**

ಸ್ಥಳದ ಅಭಾವದ ಕಾರಣ ಕಲಬುರಗಿಯ ಸಹಾಯಕ ನಿರ್ದೇಶಕರ ಕಚೇರಿಯು ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹಾಗೂ ಕಚೇರಿ ಕಟ್ಟಡ ನಿರ್ಮಾಣವು ಪೂರ್ಣಗೊಂಡ ನಂತರ ಅದನ್ನು ಖಾಲಿ ಮಾಡಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಸಂರಕ್ಷಿತ ಸ್ಮಾರಕಗಳ ಒಳಗೆ ತನ್ನ ಕಚೇರಿಗಳನ್ನು ನಿರ್ವಹಿಸುವ ಮೂಲಕ ಇಲಾಖೆಯು ಕಾಯಿದೆಯ *ಪರಿಚ್ಛೇದ 16(1)* ಅನ್ನು ಉಲ್ಲಂಘಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಇತರ ಐದು ಸ್ಥಳಗಳಲ್ಲಿ ಸ್ಮಾರಕಗಳ ಬಳಕೆಯ ಬಗ್ಗೆ ಉತ್ತರವು ಮೌನವಾಗಿದಿತ್ತು

**ಪ್ರಾಚೀನ ಸ್ಮಾರಕಗಳ ಒಳಗೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಒತ್ತುವರಿಗಳು/ಹೆಚ್ಚುವರಿ ನಿರ್ಮಾಣಗಳು**

**4.4.5** ಅಧಿನಿಯಮದ *ಪರಿಚ್ಛೇದ 2ಠ* ಅಡಿಯಲ್ಲಿ ಪ್ರಾಚೀನ ಸ್ಮಾರಕಗಳ ವಿವರಣೆಯು ಈ ಮುಂದಿನವುಗಳನ್ನು ಒಳಗೊಂಡಿರುತ್ತದೆ. (i) ಪ್ರಾಚೀನಾ ಸ್ಮಾರಕಗಳ ಅವಶೇಷಗಳು, (ii) ಪ್ರಾಚೀನ ಸ್ಮಾರಕದ ನಿವೇಶನ ಅಥವಾ ಪ್ರದೇಶ, (iii) ಅಂತಹ ಸ್ಮಾರಕಕ್ಕೆ ಬೇಲಿ ಹಾಕುವ ಸಲುವಾಗಿ ಅಥವಾ ವ್ಯಾಪಿಸುವ ಸಲುವಾಗಿ ಅಥವಾ ಅನ್ಯಥಾ ಸಂರಕ್ಷಿಸುವ ಸಲುವಾಗಿ ಅಗತ್ಯವಿರುವಂತಹ ರೀತಿಯಲ್ಲಿ ಒಂದು ಪ್ರಾಚೀನ ಸ್ಮಾರಕಕ್ಕೆ ಹೊಂದಿಕೊಂಡಲ್ಪಟ್ಟಿರುವ ಭೂಭಾಗ ಹಾಗೂ (iv) ಒಂದು ಪ್ರಾಚೀನಾ ಸ್ಮಾರಕಕ್ಕೆ ಪ್ರವೇಶಿಸುವ ಸಲುವಾಗಿನ ಅಥವಾ ಸೂಕ್ತ ಪರೀಕ್ಷಣೆಗಾಗಿ ತಲುಪಲು ಸಲುವಾಗಿನ ಮಾರ್ಗ. ಸಂರಕ್ಷಿತ ಸ್ಮಾರಕಗಳ ಸಮೀಪದಲ್ಲಿನ ಅಥವಾ ಹೊಂದಿಕೊಂಡಂತಿರುವ ಪ್ರದೇಶಗಳನ್ನು ನಿರ್ಮಾಣ ಅಥವಾ ಗಣಿಗಾರಿಕೆ ಉದ್ದೇಶಕ್ಕಾಗಿ *ನಿಯಮ 11* ಮತ್ತು *12ಠ* ಅನುಸಾರ ತಕ್ಕುದಾದ ರೀತಿಯಲ್ಲಿ ಪ್ರಕ್ರಿಯೆಗಳನ್ನು ಅನುಸರಿಸಿದ ದ ನಂತರ ಅಧಿಸೂಚನೆಗಳನ್ನು ನೀಡಿದ ನಂತರ ನಿಯಂತ್ರಿತ ಅಥವಾ ಪ್ರತಿಬಂಧಿತ ಪ್ರದೇಶಗಳು ಎಂಬುದಾಗಿ ಘೋಷಿಸಬಹುದು. ಕರ್ನಾಟಕ ಸರ್ಕಾರವು ಪ್ರಾಚೀನ ಸ್ಮಾರಕಗಳಿಗೆ ಹೊಂದಿಕೊಂಡಂತಿರುವ ಮೊದಲ 100 ಮೀಟರುಗಳನ್ನು ಪ್ರತಿಬಂಧಿತ ಪ್ರದೇಶ ಎಂಬುದಾಗಿ ಹಾಗೂ ನಂತರದ 200 ಮೀಟರುಗಳ ಪ್ರದೇಶವನ್ನು ಸಂರಕ್ಷಿತ ಪ್ರದೇಶಗಳು ಎಂಬುದಾಗಿ ಘೋಷಿಸಿತು (ಮಾರ್ಚ್–1998). ಈ ಆದೇಶದ ಕಾರ್ಯಗತಗೊಳಿಸುವಿಕೆಯನ್ನು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಲಯದಲ್ಲಿ ಪ್ರಶ್ನಿಸಲಾಯಿತು. ಇದಕ್ಕೆ ಪ್ರತಿಯಾಗಿ ಗೌರವಾನ್ವಿತ ಉಚ್ಚ ನ್ಯಾಯಲಯವು ಭೂ ಪರಿಹಾರವನ್ನು ಪಾವತಿಸುವ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಿತು. ನಿರ್ದೇಶಕರ ನೇತೃತ್ವದಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸುವ ಮೂಲಕ ಬೃಹತ್ ಪ್ರಮಾಣದ ಹಣಕಾಸು ಭಾದ್ಯತೆಯನ್ನು ನಿರ್ಧಾರಣೆ ಮಾಡಿದ ನಂತರ ನಿಯಮಗಳನ್ನು ಸೂಕ್ತವಾಗಿ ತಿದ್ದುಪಡಿಮಾಡುವ ಸಲುವಾಗಿ ಒಂದು ಪ್ರಸ್ತಾವನೆಯನ್ನು ಮಾಡಲಾಯಿತು (ಆಗಸ್ಟ್ 2014) ಆದಾಗ್ಯೂ ಈ ನಿಟ್ಟಿನಲ್ಲಿ ನವಂಬರ್–2022ರವರೆವಿಗೂ ಯಾವುದೇ ಪ್ರಗತಿಯೂ ಆಗಿರುವುದಿಲ್ಲ.

ಅಧಿಸೂಚನೆ ನೀಡಲು ಪ್ರಸ್ತಾಪಿಸಲಾಗಿದ್ದ ಕರಡು ತಿದ್ದುಪಡಿಗಳಿಗೆ ಇಲಾಖೆಯು ಕೇವಲ ಜುಲೈ 2022ರಲ್ಲಿಯಷ್ಟೇ ಖಚಿತಪಡಿಸಿದ್ದಿತಾದ್ದರಿಂದ ನಿಯಮಗಳ ಅನುವುಗಳಿಗೆ ತಿದ್ದುಪಡಿ ತರುವಲ್ಲಿ ವಿಪರೀತವಾದಂತಹ ವಿಳಂಬವನ್ನು ಲೆಕ್ಕಪರಿಶೋಧನೆಯು ಗಮನಿಸಿತು.


ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದಂತಹ ಇದೇ ರೀತಿಯ ಅಂಶಗಳಿಗೆ ಒಂದು ಸಮನಾದ ಪ್ರದೇಶವನ್ನು ನಿಗದಿಗೊಳಿಸುವ ಬದಲು ವಿಶ್ವಪಾರಂಪರಿಕ ನಿವೇಶನಗಳಲ್ಲಿ ಮತ್ತು ಪಟ್ಟಣಗಳು / ನಗರಗಳಲ್ಲಿನ ಸ್ಮಾರಕಗಳಿಗೆ ಸಂಬಂಧಿಸಿದಂತೆ ತಜ್ಞರೊಂದಿಗೆ ಸಮಾಲೋಚನೆ ಮಾಡುವ ಮೂಲಕ ಒಂದು ಕಾರ್ಯನೀತಿ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿದ್ದಿತು (ಡಿಸೆಂಬರ್–2011)[21] .

ಸಂರಕ್ಷಿತ ಸ್ಮಾರಕಗಳ ಸಮೀಪ ಅಥವಾ ಹೊಂದಿಕೊಂಡಂತಿರುವ ಪ್ರದೇಶಗಳನ್ನು ನಿಯಂತ್ರಿಸುವ ಸಲುವಾಗಿ ಸೂಕ್ತ ಆದೇಶಗಳನ್ನು ನೀಡುವಲ್ಲಿನ ವಿಫಲತೆಯು ಅಥವಾ ವಿಳಂಬವು ಪ್ರಾಚೀನ ಸ್ಮಾರಕಗಳ ಅತ್ಯಂತ ನಿಕಟವಾಗಿ ನಿಯಂತ್ರಣವಿಲ್ಲದ ಅಥವಾ ಅನಧಿಕೃತ ಕಟ್ಟಡಗಳ ನಿರ್ಮಾಣದ ಸಂಭಾವ್ಯ ಅಪಾಯವು ಉದ್ಭವಿಸುವಲ್ಲಿ ಪರಿಣಮಿಸಬಹುದು. ಮುಂದುವರೆದು ಜಂಟಿ ಭೌತಿಕ ಪರಿಶೀಲನೆಯ ವೇಳೆಯಲ್ಲಿ 39 ಸ್ಥಳಗಳಲ್ಲಿ *(ಶೇಕಡ 55)* ಹಾಗೂ ಅವುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳು ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ***(ಅನುಬಂಧ 3)*** ಇವುಗಳಲ್ಲಿ ಕೆಲವುಗಳನ್ನು ಈ ಕೆಳಗೆ ತೋರಿಸಲಾಗಿದೆ.




**ಛಾಯಾಚಿತ್ರ ಸಂಖ್ಯೆ 4.15: ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಯಮಕನಮರಡಿಯಲ್ಲಿ ಕೋಟೆಯ ಸುತ್ತಲೂ ಅನಧಿಕೃತ ನಿರ್ಮಾಣಗಳು.**

[21] 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ಸಾಲಿಗೆ ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ವರದಿ ಸಂಖ್ಯೆ 2ರ (ಸಿವಿಲ್) ***ಕಂಡಿಕೆ 2.3.9.4.***




**ಛಾಯಾಚಿತ್ರ ಸಂಖ್ಯೆ 4.16: ಹುಕ್ಕೇರಿ ತಾಲ್ಲೂಕಿನ ಯಮಕನಮರಡಿಯಲ್ಲಿ ಕೋಟೆಗೆ ಹೊಂದಿಕೊಂಡಂತೆ ಪ್ರಗತಿಯಲ್ಲಿರುವ ನಿರ್ಮಾಣ ಕಾಮಗಾರಿ.**




**ಛಾಯಾಚಿತ್ರ ಸಂಖ್ಯೆ 4.17: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ದೇವದುರ್ಗ ಕೋಟೆಗೆ ಹೊಂದಿಕೊಂಡಂತೆ ಅನಧಿಕೃತ ವಾಸದ ಮನೆಗಳು.**

ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳು (ಅಧಿನಿಯಮ) 1965ಕ್ಕೆ ಸೂಕ್ತ ತಿದ್ದುಪಡಿಯನ್ನು ಇಲಾಖೆಯು ಪ್ರಸ್ತಾಪಿಸಿರುವುದು ಹಾಗೂ ಒಂದು ಕರಡು ಅಧಿಸೂಚನೆಯನ್ನು ಮೇ 2023ರಲ್ಲಿ ಪ್ರಕಟಿಸಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ – 2023).

**ಶಿಫಾರಸ್ಸು 8:**

**ಸಂರಕ್ಷಿತ ಪ್ರದೇಶ ನೋಟೀಸು ಫಲಕಗಳ ಪ್ರದರ್ಶನ, ದುರುಪಯೋಗ ಮತ್ತು ಒತ್ತುವರಿಗಳನ್ನು ತಡೆಯುವ ಸಲುವಾಗಿ ಸಮರ್ಪಕ ಸಂಖ್ಯೆಯ ನಿಗಾವಣೆ ಮತ್ತು ಸುರಕ್ಷ ಸಿಬ್ಬಂದಿಯನ್ನು ಒದಗಿಸುವುದು, ಭದ್ರತಾ ಮೂಲಸೌಕರ್ಯ ಅನುಕೂಲತೆಗಳನ್ನು ಎಲ್ಲಾ ಸ್ಥಳಗಳಲ್ಲಿಯೂ ಒದಗಿಸಿರುವುದನ್ನು ಇಲಾಖೆಯು ಖಚಿತಪಡಿಸಿಕೊಳ್ಳಬೇಕು.**

**ಸಂರಕ್ಷಿತ ಸ್ಮಾರಕ ನಿವೇಶನಗಳಲ್ಲಿ ಚಲನಚಿತ್ರ ಸೆರೆಹಿಡಿಯುವಿಕೆ**

**4.4.6** ಅಧಿನಿಯಮದ ಅಡಿಯಲ್ಲಿ ರೂಪಿಸಲಾಗಿರುವ ಯಾವುದೇ ನಿಯಮಗಳ ಷರತ್ತಿಗೆ ಒಳಪಟ್ಟಂತೆ ಯಾವುದೇ ಸ್ಮಾರಕಗಳನ್ನು ಪ್ರವೇಶಿಸಲು ಸಾರ್ವಜನಿಕರಿಗೆ ಹಕ್ಕನ್ನು ಅಧಿನಿಯಮದ *ಪರಿಚ್ಛೇದ 18* ಒದಗಿಸಿರುವುದು ಹಾಗೂ ಸಂರಕ್ಷಿತ ಸ್ಮಾರಕಗಳಲ್ಲಿ ಪ್ರತಿಬಂಧಕ ಚಟುವಟಿಕೆಗಳನ್ನು ನಡೆಸುವುದು ಅಧಿನಿಯಮದ *ಪರಿಚ್ಛೇದ 26(1)(i)ರ* ಅಡಿಯಲ್ಲಿ ಶಿಕ್ಷಾರ್ಹವಾಗಿರುತ್ತದೆ. ಮುಂದುವರೆದು ನಿಯಮಗಳ *ಅಧ್ಯಾಯ V* ಪ್ರತಿಗಳನ್ನು ಪಡೆಯುವುದು ಮತ್ತು ಛಾಯಾಚಿತ್ರಗಳ ಸೆರೆಹಿಡಿಯುವಿಕೆ ಕಾರ್ಯಚಟುವಟಿಕೆಗಳಿಗೆ ಪರವಾನಗಿಗಳಿಗೆ ಸಂರಕ್ಷಿತ ಸ್ಮಾರಕಗಳ ಅರ್ಜಿ ಸಲ್ಲಿಸುವುದು, ಅನುಮತಿ ನೀಡುವುದು ಅಥವಾ ತಿರಸ್ಕರಿಸುವುದು, ಪರವಾನಿಗೆಯನ್ನು ರದ್ದುಗೊಳಿಸುವುದು ಮುಂತಾದ ಸಂಬಂಧಿತ ವಿಷಯಗಳನ್ನು ವ್ಯವಹರಿಸುತ್ತದೆ.

ಇಲಾಖೆಯು ಚಲನಚಿತ್ರ ಸೆರೆಹಿಡಿಯುವ ಸಲುವಾಗಿ ಚಲನಚಿತ್ರ ನಿರ್ಮಾಪಕರುಗಳಿಂದ ಅರ್ಜಿಯನ್ನು ಸ್ವೀಕರಿಸಿದನಂತರ ಷರತ್ತುಗಳು ಮತ್ತು ನಿಬಂಧನೆಗಳನ್ನು ಸೂಚಿಸುವ ಮೂಲಕ ಶುಲ್ಕಗಳು ಮತ್ತು ಭದ್ರತಾ ಠೇವಣಿಗಳನ್ನು ಸ್ವೀಕರಿಸಿದ ನಂತರ ಅನುಮತಿಯನ್ನು ನೀಡುತ್ತದೆ. ಅನುಮತಿಯ ಆದೇಶದ ಒಂದು ಪ್ರತಿಯನ್ನು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಹಾಗೂ ತನ್ನ ಸ್ವಂತ ಉಪಕಚೇರಿಗಳಿಗೆ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹಾಗೂ ಸಂರಕ್ಷಿತ

ಸ್ಮಾರಕಗಳ ಯಾವುದೇ ಹಾನಿಗಳನ್ನು ತಪ್ಪಿಸುವ ಸಲುವಾಗಿ ಓರ್ವ ಇಲಾಖಾ ಪ್ರತಿನಿಧಿಯನ್ನು ವ್ಯವಸ್ಥೆ ಮಾಡುವಂತೆ ಸೂಚಿಸುವುದರೊಂದಿಗೆ ಕಳುಹಿಸಿಕೊಡುವುದು.

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ಕರ್ನಾಟಕ ಸರ್ಕಾರವು ಏಕಗವಾಕ್ಷಿಯ ಅಡಿಯಲ್ಲಿ ಅನುಮತಿಯನ್ನು ನೀಡುವ ಸಲುವಾಗಿ ಮಾರ್ಗಸೂಚಿಗಳನ್ನು ನೀಡಿತು (ಸೆಪ್ಟೆಂಬರ್–2010), ಅದರ ಅನುಸಾರ ಭದ್ರತಾ ಠೇವಣಿಯ ಮರುಪಾವತಿಗಾಗಿ ಒಂದು ನಿರಾಕ್ಷೇಪಣ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬೇಕಿದ್ದಿತು.ಹಾಗೂ ಸಂರಕ್ಷಿತ ಸ್ಮಾರಕಗಳಲ್ಲಿ ಛಾಯಾಚಿತ್ರಗಳನ್ನು ಸೆರೆಹಿಡಿಯುವ ವೇಳೆಯಲ್ಲಿ ಯಾವುದೇ ಹಾನಿಯನ್ನು ಮಾಡಲಾಗಿರುವುದಿಲ್ಲ ಎಂಬುದರ ಬಗ್ಗೆ ಒಂದು ಘೋಷಣಾ ಪತ್ರವನ್ನು ಪಡೆದುಕೊಂಡ ನಂತರ ಭದ್ರತಾ ಠೇವಣಿಯನ್ನು ಹಿಂಪಾವತಿಸಬೇಕಿದ್ದಿತು. ಆದಾಗ್ಯೂ ಚಲನಚಿತ್ರ ತಯಾರಕರುಗಳಿಗೆ ಇಲಾಖೆಯು ನೀಡಿದ ಅನುಮೋದನಾ ಪತ್ರಗಳಲ್ಲಿ ನಿರಾಕ್ಷೇಪಣ ಪ್ರಮಾಣ ಪತ್ರ / ಅವರುಗಳಿಂದ ಘೋಷಣಾ ಪತ್ರ ಇವುಗಳ ಬಗ್ಗೆ ಏನನ್ನು ಸೂಚಿಸಿರಲಿಲ್ಲ.

  ಇಲಾಖೆಯು ಸ್ಮಾರಕಗಳು ಯಥಾಸ್ಥಿತಿಯಲ್ಲಿರುವ ಬಗ್ಗೆ ವರದಿ/ ಷರಾಗಳನ್ನು ಪಡೆಯದೇ ಠೇವಣಿಯ ಮರುಪಾವತಿಗಾಗಿ ಇಲಾಖಾ ಪ್ರತಿನಿಧಿಯಿಂದ ಚಲನಚಿತ್ರ ಸೆರೆಹಿಡಿಯುವಿಕೆ ಚಟುವಟಿಕೆಗಳು ಪೂರ್ಣಗೊಂಡಿರುವುದಾಗಿ ಒಂದು ಮಾಹಿತಿಯನ್ನು ಮಾತ್ರ ಅವಲಂಬಿಸಿದ್ದಿತು (ಒಂದು ಘೋಷಣಾ ಪತ್ರವನ್ನು ಪಡೆದುಕೊಂಡಿರಲಿಲ್ಲ).

  ಸಂಬಂಧಿತ ಇಲಾಖಾ ಪ್ರತಿನಿಧಿ/ಚಲನಚಿತ್ರ ತಯಾರಕರಿಂದ ವರದಿಯನ್ನು ಪಡೆದುಕೊಳ್ಳುವ ಮೂಲಕ ಸ್ಮಾರಕಗಳ ಯಾಥಾಸ್ಥಿತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023).

- ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಅಧಿಕೃತ ರಾಜ್ಯಪತ್ರದ ಮೂಲಕ (ಜುಲೈ 2015) ಟಿಕೇಟುಗಳನ್ನು ಕೊಳ್ಳುವ ಮೂಲಕ ಪ್ರವೇಶಿಸಲಾಗುವ ಸ್ಮಾರಕಗಳ ಪ್ರವೇಶ ಶುಲ್ಕಗಳನ್ನು ಹಾಗೂ ಚಲನಚಿತ್ರಗಳ ಸೆರೆಹಿಡಿಯುವಿಕೆ ಚಟುವಟಿಕೆಗಳಿಗೆ[22] ಶುಲ್ಕಗಳನ್ನು ಪರಿಷ್ಕರಿಸಿತು. ಕರ್ನಾಟಕ ಸರ್ಕಾರವು ದರಗಳ ಪರಿಷ್ಕರಣೆಗಾಗಿ[23] ಇಲಾಖೆಯ ಪ್ರಸ್ತಾವನೆಯನ್ನು (ಜನವರಿ 2021) ಅನುಮೋದಿಸಿರಲಿಲ್ಲವಾದರೂ ಇಲಾಖೆಯು ಏಪ್ರಿಲ್–2022ರಿಂದ ಜಾರಿಗೆ ಬಂದಂತೆ ಹೊಸದರಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ್ದಿತು.

### *ಸ್ಮಾರಕಗಳ ಸಂರಕ್ಷಣೆ ಹಾಗೂ ನಿರ್ವಹಣೆ*

**4.5** ರಾಷ್ಟ್ರಿಯ ಸಂರಕ್ಷಣಾ ಕಾರ್ಯನೀತಿಯು ಸಂರಕ್ಷಣೆಯನ್ನು ಪ್ರಾಚೀನ ಸ್ಮಾರಕಗಳ ಭೌತಿಕ, ವಿನ್ಯಾಸ ಮತ್ತು ಪ್ರಾಮಾಣಿಕತೆಯನ್ನು ಪುರಾತತ್ವಶಾಸ್ತ್ರೀಯವಾಗಿ ಹಾಗೂ ವಾಸ್ತುಶಿಲ್ಪ ಮೌಲ್ಯದಲ್ಲಿ ಐತಿಹಾಸಿಕ ಪ್ರಾಮುಖ್ಯತೆ ಮತ್ತು ಸಾಂಸ್ಕೃತಿಕ ಅಥವಾ ಅಗೋಚರ / ಸ್ಪರ್ಶಿಸಲಾಗದ ಸಾಂಗತ್ಯಗಳನ್ನು ಸುರಕ್ಷಿತವಾಗಿಡುವ ಒಂದು ಪ್ರಕ್ರಿಯೆ ಎಂಬುದಾಗಿ ವಿವರಿಸಿರುವುದು. ಮುಂದುವರೆದು, ಅದು ಎಲ್ಲಾ ಪ್ರಾಚೀನ ಸ್ಮಾರಕಗಳನ್ನು ಅವುಗಳ ಗಮನಾರ್ಹತೆಯನ್ನು ಉಳಿಸಿಕೊಳ್ಳುವ ಸಲುವಾಗಿ ತಕ್ಕುದಾದ ರೀತಿಯಲ್ಲಿ ನಿರ್ವಹಿಸತಕ್ಕದ್ದು ಹಾಗೂ ಯಾವುದೇ ಪ್ರಮುಖ ಅಥವಾ ಪ್ರಧಾನ ಅನಗತ್ಯ ಮಧ್ಯಸ್ಥಿಕೆಗಳನ್ನು ತಡೆಯುವ ಸಲುವಾಗಿ ನಿಯತವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು ಎಂಬುದಾಗಿಯು ಅದು ನಿರ್ಧಿಷ್ಟಪಡಿಸಿರುವುದು.

---

[22] ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಇತರೆ ಸ್ಮಾರಕಗಳ ಚಲನಚಿತ್ರಗಳನ್ನು ಸೆರೆಹಿಡಿಯುವ ಸಲುವಾಗಿ ₹ 10,000/– ಹಿಂಪಾವತಿಸಬಹುದಾದ ಭದ್ರತಾ ಠೇವಣಿಯೊಂದಿಗೆ ದಿನ ಒಂದಕ್ಕೆ ₹ 50,000/–ಕ್ಕೆ ಪರಿಷ್ಕರಿಸಿದ್ದಿತು.

[23] ದಿನ ಒಂದಕ್ಕೆ ₹ 5,000/–ದಿಂದ ₹ 10,000/–ಕ್ಕೆ ಹಾಗೂ ಭದ್ರತಾ ಠೇವಣಿ ₹ 10,000/–ದಿಂದ ₹ 25,000/–ಕ್ಕೆ.



**ಛಾಯಾಚಿತ್ರ ಸಂಖ್ಯೆ 4.18 : ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿಯಲ್ಲಿ ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಸಂರಕ್ಷಿಸಿರುವಂತಹ ಶ್ರೀ ವೀರನಾರಾಯಣ ದೇವಸ್ಥಾನ.**


**ಸಂರಕ್ಷಣಾ ಹಾಗೂ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳದಿರುವ ಕಾರಣ ದುಸ್ಥಿತಿಗೆ ತಲುಪಿರುವುದು.**

**4.5.1** ಒಂದು ಅಧಿಸೂಚನೆಯ ಮೂಲಕ ಒಂದು ಐತಿಹಾಸಿಕ ಸ್ಮಾರಕವನ್ನು ಘೋಷಿಸಿದನಂತರ ಇಲಾಖೆಯು ಅಂತಹ ಸ್ಮಾರಕದ ಮೂಲ ರೂಪದಲ್ಲಿ ಅದನ್ನು ಸಂರಕ್ಷಿಸುವ ಸಲುವಾಗಿ ಅಗತ್ಯ ಸಂರಕ್ಷಣಾ / ನಿರ್ವಹಣಾ ಕಾಮಗಾರಿಗಳನ್ನು ಕಾಲಾನುಕಾಲಕ್ಕೆ ನಡೆಸಿಕೊಂಡು ಹೋಗತಕ್ಕದ್ದು. ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಒಂದು ನಿಯತ ನಿರ್ವಹಣೆಯ ಕೊರತೆಯ ಕಾರಣ ಅನೇಕ ಪ್ರಾಚೀನ ಸ್ಮಾರಕಗಳು/ ಪ್ರಾಚೀನ ಹಸ್ತಕೃತಿಗಳ ಭೌತಿಕ ರಚನೆಗಳು ದುಸ್ತಿತಿಗೆ ತಲುಪಿದ್ದವು / ಹಾಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಾರ್ಷಿಕ ಸಂರಕ್ಷಣಾ ಪೂರ್ವಭಾವಿ ಯೋಜನೆಯ ಅನುಪಸ್ಥಿತಿಯಲ್ಲಿ ಇಲಾಖೆಯು ಅಧಿಸೂಚಿತ ಸ್ಮಾರಕಗಳಲ್ಲಿ ಪಾಚಿ ಮತ್ತು ಸಸ್ಯಗಳ ಬೆಳವಣಿಗೆಯನ್ನು ತೆಗೆದುಹಾಕಿ ಸ್ವಚ್ಛಗೊಳಿಸುವ ಸಲುವಾಗಿ ಯಾವುದೇ ನಿರ್ವಹಣಾ ವೇಳಾಪಟ್ಟಿಯನ್ನು ತಯಾರಿಸಿರಲಿಲ್ಲ.



**ಛಾಯಾಚಿತ್ರ ಸಂಖ್ಯೆ 4.19: ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ 1930ರಲ್ಲಿ ಅಧಿಸೂಚನೆ ಹೊರಡಿಸಲ್ಪಟ್ಟಿದ್ದಂತಹ ಒಂದು ಸ್ಮಾರಕದ ಮೇಲೆ ಅಲದ ಮರ ಮತ್ತು ಪಾಚಿ ಬೆಳೆದಿರುವುದು (ಲೆಕ್ಕಪರಿಶೋಧನೆಯಲ್ಲಿ ಮಾದರಿ ಆಯ್ಕೆಮಾಡಿರದ ಸ್ಮಾರಕ).**

ಮುಂದುವರೆದು ರಾಮನಗರ ಜಿಲ್ಲೆಯಲ್ಲಿ ಬೆಂಗಳೂರಿನ ನಿರ್ಮಾತೃ ಹಿರಿಯ ಕೆಂಪೇಗೌಡರ ಸಮಾಧಿಯು ಶಿಥಿಲಾವಸ್ಥೆಯಲ್ಲಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಸ್ಮಾರಕವು ಕುಸಿದುಹೋಗುವುದನ್ನು ತಡೆಯುವ ಸಲುವಾಗಿ ಗ್ರಾಮಸ್ಥರು ಒಂದು ತಡೆಕಲ್ಲನ್ನು ಅದಕ್ಕೆ ಸೇರಿಸುವ ಮೂಲಕ ಪೂರ್ವಸ್ಥಿತಿಗೆ ತಂದಿದ್ದರು. ಇಲಾಖೆಯ ಸಂರಕ್ಷಣಾ ಕಾಮಗಾರಿಗಳಿಗೆ ಆದ್ಯತೆಯನ್ನು ಅಗತ್ಯತೆಯ ಆಧಾರದಲ್ಲಿ ನೀಡಿರಲಿಲ್ಲವೆಂಬುದನ್ನು ಇದು ತೋರಿಸುತ್ತದೆ. ಸಂರಕ್ಷಣಾ ಕಾರ್ಯಕ್ಕೆ ಆದ್ಯತೆ ನೀಡುವಲ್ಲಿ ಇಲಾಖೆ ಮಾಡಿದ ಲೋಪದಿಂದಾಗಿ ಸ್ಮಾರಕಗಳು ವಿನಾಶದ ಅಂಚಿನಲ್ಲಿನಲ್ಲಿದ್ದವು.




**ಛಾಯಾಚಿತ್ರ ಸಂಖ್ಯೆ 4.20: ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕೆಂಪಾಪುರದಲ್ಲಿ ಹಿರಿಯ ಕೆಂಪೇಗೌಡರ (ಬೆಂಗಳೂರಿನ ನಿರ್ಮಾತೃ) ಸಮಾಧಿಯ ಸ್ಥಿತಿಗತಿ.**

ಎಲ್ಲಾ ಸ್ಮಾರಕಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಗಮನಾರ್ಹ ಸಂಖ್ಯೆ ಸಿಬ್ಬಂದಿ ಮತ್ತು ಹಣಕಾಸಿನ ಅಗತ್ಯತೆ ಇರುತ್ತದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ಮುಂದುವರೆದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ 2005ರಡಿಯಲ್ಲಿ ಸಂರಕ್ಷಿತ ಸ್ಮಾರಕಗಳಲ್ಲಿ ಸ್ವಚ್ಛತೆ, ಸಸ್ಯತೋಟಗಳ ನಿರ್ವಹಣೆ ಹಾಗೂ ಹಸಿರು ಬೇಲಿಯನ್ನು[24] ಅಳವಡಿಸುವಂತೆ ಎಲ್ಲಾ ಜಿಲ್ಲಾ ಆಡಳಿತಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಒಂದು ಜಂಟಿ ಸುತ್ತೋಲೆಯನ್ನು ನೀಡಲಾಗಿರುವುದು.

**ಸಂರಕ್ಷಣಾ ಕಾಮಗಾರಿಗಳಿಗಾಗಿ ಹಣಕಾಸಿನ ಹಂಚಿಕೆ ಮತ್ತು ಬಳಕೆ**

**4.5.2** ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯು (ಕಲಂ 3.04) ಒಂದು ಸ್ಮಾರಕದ ಸಂರಕ್ಷಣೆಯು ಒಂದು ಅವಿರತ ಪ್ರಕ್ರಿಯೆಯಾಗಿರುತ್ತದೆ ಹಾಗೂ ಸಮರ್ಪಕ ಸಂಪನ್ಮೂಲಗಳನ್ನು (ಸಿಬ್ಬಂದಿ ಮತ್ತು ಹಣಕಾಸು) ಮುಂದಿನ ತಲೆಮಾರಿಗಾಗಿ ಸಂರಕ್ಷಿಸುವ ಸಲುವಾಗಿ ಲಭ್ಯವಿರುವಂತೆ ಮಾಡತಕ್ಕದ್ದು ಎಂಬುದಾಗಿ ತಿಳಿಸಿರುವುದು. ಇಲಾಖೆಯು ಸ್ಮಾರಕಗಳ ಸಂರಕ್ಷಣೆಯ ಕಡೆಗೆ 2017–22 ರಲ್ಲಿ ₹ 37.05 ಕೋಟಿ ಮೊತ್ತವನ್ನು (ಇಲಾಖೆಯು ಭರಿಸಿದ ಒಟ್ಟಾರೆ ₹ 123.65 ಕೋಟಿ ವೆಚ್ಚದ ಶೇಕಡ 30ರಷ್ಟು).

[24] ಜೈವಿಕ ಬೇಲಿಗಳು ಜಾನುವಾರು ಮತ್ತು ವನ್ಯಜೀವಿಗಳ ವಿರುದ್ಧ ರಕ್ಷಣೆ ನೀಡುವ ಜಮೀನಿನಲ್ಲಿ ಮತ್ತು ಹೊಲದ ಗಡಿಗಳಲ್ಲಿ ನೆಡಲಾದ ಸಸ್ಯಗಳ ಸಾಲುಗಳಾಗಿವೆ.

**ಸಂರಕ್ಷಣಾ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಗಾಗಿ ಹಣಕಾಸಿನ ಹಂಚಿಕೆಯಲ್ಲಿ ಪ್ರಾದೇಶಿಕ ಅಸಮತೋಲನ**

**4.5.3** ಕರ್ನಾಟಕ ಸರ್ಕಾರವು ಇಲಾಖೆಯನ್ನು ಪುನರ್–ರಚಿಸುವಲ್ಲಿ[25] ಮತ್ತು ಮೈಸೂರಿನಲ್ಲಿನ ನಿರ್ದೇಶಕರ ಹುದ್ದೆಯನ್ನು ನಿರ್ದೇಶಕರು (ಪುರಾತತ್ವ ಶಾಸ್ತ್ರ) ಎಂಬುದಾಗಿ ಮರುನಾಮಕರಣ ಮಾಡುವ ಪ್ರಾಥಮಿಕ ಉದ್ದೇಶವು ಪರಿಶೋಧನೆ/ ಸಂಶೋಧನೆಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ತೆಗೆದುಹಾಕುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಸ್ಮಾರಕಗಳ ರಕ್ಷಣೆ, ಸುರಕ್ಷತೆ, ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಸಮಯೋಚಿತವಾಗಿ ಮೇಲ್ವಿಚಾರಣೆ ಮಾಡುವುದನ್ನು ಖಚಿತಪಡಿಸಿಕೊಳ್ಳುವುದಾಗಿದ್ದಿತು.

ಸಂರಕ್ಷಣಾ ಕಾಮಗಾರಿಗಳ ಮೇಲೆ ಹಣಕಾಸಿನ ಹಂಚಿಕೆ ಮತ್ತು ವೆಚ್ಚಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು 2017–22ರ ಸಾಲುಗಳಲ್ಲಿ 228 ಕಾಮಗಾರಿಗಳಿಗಾಗಿ ಹಂಚಿಕೆ ಮಾಡಲಾಗಿದ್ದ ₹ 34.92 ಕೋಟಿ ಮೊತ್ತಕ್ಕೆ ಪ್ರತಿಯಾಗಿ 154 ಕಾಮಗಾರಿಗಳ ಮೇಲೆ ಈ ಕೆಳಗೆ ತೋರಿಸಿರುವಂತೆ ₹ 37.05 ಕೋಟಿ ಮೊತ್ತವನ್ನು ಭರಿಸಲಾಗಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು.

**ಕೋಷ್ಟಕ ಸಂಖ್ಯೆ 4.1: ವಿಭಾಗವಾರು ಹಣಕಾಸಿನ ಹಂಚಿಕೆ ಮತ್ತು ವೆಚ್ಚಗಳ ವಿವರಗಳನ್ನು ತೋರಿಸುವ ತಃಖ್ತೆ**

| ಕ್ರಮ ಸಂಖ್ಯೆ | ವಿವರಗಳು | ಬೆಂಗಳೂರು | ಮೈಸೂರು | ಕಲಬುರಗಿ | ಬೆಳಗಾವಿ | ಒಟ್ಟು |
|---|---|---|---|---|---|---|
| 1 | ಜಿಲ್ಲೆಗಳ ಸಂಖ್ಯೆ | 06 | 07 | 06 | 07 | **26** |
| 2 | ಸ್ಮಾರಕಗಳ ಸಂಖ್ಯೆ | 75 | 122 | 249 | 365 | **811**[26] |
| 3 | ಯೋಜಿಸಲಾಗಿದ್ದ ಕಾಮಗಾರಿಗಳು | 32 | 84 | 49 | 63 | **228** |
| 4 | ಆಯವ್ಯಯ ಹಂಚಿಕೆ (ಕೋಟಿ ರೂಗಳಲ್ಲಿ) | 4.61 | 12.45 | 8.96 | 8.90 | **34.92** |
| | | **17.06** | | **17.86** | | |
| 5 | ಶೇಕಡವಾರು | 13.21 | 35.67 | 25.65 | 25.47 | **100.00** |
| | | **48.88** | | **51.12** | | |
| 6 | ಕಾರ್ಯಗತಗೊಳಿಸಲಾದ ಕಾಮಗಾರಿಗಳು | 24 | 67 | 28 | 35 | **154** |
| 7 | ಭರಿಸಲಾಗಿದ್ದ ವೆಚ್ಚಗಳು (ಕೋಟಿ ರೂಪಾಯಿಗಳಲ್ಲಿ) | 5.20 | 11.99 | 11.50 | 8.36 | **37.05** |
| | | **17.19** | | **19.86** | | |
| 8 | ಶೇಕಡವಾರು | 14.03 | 32.36 | 31.05 | 22.56 | **100.00** |
| | | **46.39** | | **53.61** | | |

**ಮೂಲ: ಇಲಾಖೆಯು ಒದಗಿಸಿರುವ ಮಾಹಿತಿ ಹಾಗೂ ಲೆಕ್ಕಪರಿಶೋಧನೆಯು ಕ್ರೋಡೀಕರಿಸಿರುವುದು**

ಮೇಲಿನ ಕೋಷ್ಟಕದಿಂದ ಕಂಡುಬಂದಂತೆ ₹ 17.19 ಕೋಟಿ ಮೊತ್ತವನ್ನು ಕೇವಲ 197 ಸ್ಮಾರಕಗಳನ್ನು (ಶೇಕಡ 24) ಹೊಂದಿದ್ದಂತಹ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಅಡಿಯಲ್ಲಿನ 13 ಜಿಲ್ಲೆಗಳಲ್ಲಿ ಕಾಮಗಾರಿಗಳಿಗಾಗಿ ಉಪಯೋಗಿಸಲಾಗಿದ್ದಿತು. ಇದಕ್ಕೆ ಪ್ರತಿಯಾಗಿ 614 ಸ್ಮಾರಕಗಳನ್ನು (ಶೇಕಡ 76) ಹೊಂದಿದ್ದಂತಹ ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ಕೇವಲ ₹ 19.86 ಕೋಟಿ ಮೊತ್ತವನ್ನು ಮಾತ್ರ ಭರಿಸಲಾಗಿದ್ದಿತು. ಸ್ಮಾರಕಗಳ ಜಂಟಿ ಪರಿಶೀಲನೆಯಿಂದ ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿನ ಸ್ಮಾರಕಗಳು ಬೆಂಗಳೂರು ಮತ್ತು ಮೈಸೂರು ವಿಭಾಗಗಳಿಗಿಂತ ಹೆಚ್ಚು ಶಿಥಿಲಗೊಂಡಿರುವುದು ಕಂಡುಬಂದಿದೆ.

2017–18 ರಿಂದ 2021–22ರ ನಡುವಿನ ಅವಧಿಯಲ್ಲಿ 37 ಸ್ಮಾರಕಗಳನ್ನು ಹೊಂದಿದ್ದಂತಹ ಉಳಿದ 5 ಜಿಲ್ಲೆಗಳಲ್ಲಿ (ಬೆಂಗಳೂರು ವಿಭಾಗದ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ,

[25] ದಿನಾಂಕ 23.02.2012ರ ಆದೇಶದ ಮೂಲಕ.

[26] ಯಾವುದೇ ಕಾಮಗಾರಿಗಳನ್ನು ಯೋಜಿಸಿರದ ಐದು ಜಿಲ್ಲೆಗಳಲ್ಲಿನ 37 ಸ್ಮಾರಕಗಳನ್ನು ಒಳಗೊಂಡಿರುವುದಿಲ್ಲ.

ಚಿತ್ರದುರ್ಗ, ರಾಮನಗರ ಹಾಗೂ ಮೈಸೂರು ವಿಭಾಗದಲ್ಲಿ ಕೊಡಗು ಜಿಲ್ಲೆ) ಯಾವುದೇ ಕಾಮಗಾರಿಗಳನ್ನು ಯೋಜಿಸಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಸಂಪನ್ಮೂಲಗಳ ವಿತರಣೆಯಲ್ಲಿ ಪ್ರಾದೇಶಿಕ ಅಸಮತೋಲನವು ಸಂರಕ್ಷಣಾ ಕಾಮಗಾರಿಗಳನ್ನು ಆದ್ಯತೆಗೊಳಿಸುವ ದೀರ್ಘಾವಧಿ ಕ್ರಿಯಾ ಯೋಜನೆಯ ಅನುಪಸ್ಥಿತಿಯ ಪರಿಣಾಮವಾಗಿ ಆಗಿರುತ್ತದೆ. ಇದು ಸರ್ಕಾರದಿಂದ ಇಲಾಖೆಯನ್ನು ಪುನರ್–ರಚನೆಗೊಳಿಸಿದ್ದರ ಪ್ರಾಥಮಿಕ ಉದ್ದೇಶವನ್ನು ಸಹ ವಿಫಲಗೊಳಿಸುವುದು.

**ಶಿಫಾರಸು:**

9. **ಸರ್ಕಾರವು ರಾಷ್ಟ್ರೀಯ ಕಾರ್ಯನೀತಿಯ ಅನುಸಾರವೇ ಸ್ಮಾರಕಗಳ ಸಂರಕ್ಷಣೆಗಾಗಿ ಒಂದು ನಿರ್ಧಿಷ್ಟ ರಾಜ್ಯ ಕಾರ್ಯನೀತಿಯನ್ನು ರೂಪಿಸತಕ್ಕದ್ದು.**
10. **ಸಂರಕ್ಷಣೆ ಮತ್ತು ನಿರ್ವಹಣಾ ಕಾಮಗಾರಿಗಳಿಗಾಗಿ ಅತ್ಯುತ್ತಮ ಸಂಪನ್ಮೂಲ ಹಂಚಿಕೆಯನ್ನು ಐತಿಹಾಸಿಕ ಪ್ರಾಮುಖ್ಯತೆ, ನಿರ್ಮಾಣದ ಪ್ರಾಮಾಣಿಕತೆ, ಪ್ರಾದೇಶಿಕ ಸಮಾನತೆ ಇತ್ಯಾದಿಗಳಂತಹ ಅಂಶಗಳ ಆಧಾರದ ಮೇರೆಗೆ ಮಾಡತಕ್ಕದ್ದು**

**ಅಸಮರ್ಪಕ ಸಾಮರ್ಥ್ಯ ನಿರ್ಮಾಣ ಕ್ರಮಗಳು**

**4.5.4** ವಿವಿಧ ರೀತಿಯ ಸಂರಕ್ಷಣಾ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಾದಂತಹ ಹಾಗೂ ಮುಕ್ತಗೊಳ್ಳಬೇಕಾದಂತಹ ತರಬೇತಿ ಮತ್ತು ನೈಪುಣ್ಯತೆಯನ್ನು ಹೊಂದಿರುವಂತಹ ಸಂರಕ್ಷಣಾಕಾರರುಗಳು, ಕುಶಲಕರ್ಮಿಗಳು ಮತ್ತು ಕಲಾ ಕೆಲಸಗಳ ವ್ಯಕ್ತಿಗಳ ತಂಡವನ್ನು ನಿಯತವಾಗಿ ಇಂದಿನದಿನದನ್ನಾಗಿ ಮಾಡುವುದನ್ನು ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ ಕಲಂ 7 ಚಿಂತಿಸಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸಂರಕ್ಷಿತ ಸ್ಮಾರಕಗಳು ಅಥವಾ ಸಂರಕ್ಷಿಸಿರದ ಐತಿಹಾಸಿಕ ಕಟ್ಟಡಗಳ ಸಂರಕ್ಷಣೆಗಾಗಿ ಜವಾಬ್ದಾರಿಯುತವಾಗಿರುವ ಕೇಂದ್ರ ಮತ್ತು ರಾಜ್ಯ ಸಂಸ್ಥೆಗಳನ್ನು ಸಹಾ ಸಂರಕ್ಷಣೆ ಮತ್ತು ನಿರ್ವಹಣೆಯ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅರಿವನ್ನು ಹೆಚ್ಚಳಗೊಳಿಸಿಕೊಳ್ಳುವ ಸಲುವಾಗಿ ಕಾಲಾನುಕಾಲಕ್ಕೆ ತರಬೇತಿಗಾಗಿ ಅವರುಗಳ ಆಂತರಿಕ ಸಿಬ್ಬಂದಿಯನ್ನು ಕಳುಹಿಸಿಕೊಡುವ ಸಲುವಾಗಿ ಪ್ರೋತ್ಸಾಹಿಸತಕ್ಕದ್ದು ಎಂಬುದನ್ನು ಸಹ ಕಾರ್ಯನೀತಿಯು ಒತ್ತಿ ಹೇಳುವುದು.

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ರಾಜ್ಯಸರ್ಕಾರ / ಇಲಾಖೆಯು ಸಾಮರ್ಥ್ಯ ನಿರ್ಮಾಣ ಕ್ರಮಗಳಿಗಾಗಿ ಅಗತ್ಯತೆಯನ್ನು ಎತ್ತಿ ತೋರಿಸುವಂತಹ ಸಂರಕ್ಷಣಾ ಕಾರ್ಯನೀತಿಯನ್ನು ರೂಪಿಸಿರಲಿಲ್ಲ ಹಾಗು ತಾಂತ್ರಿಕ ಸಿಬ್ಬಂದಿಗಾಗಿ ಯಾವುದೇ ನಿಯತಕಾಲಿಕ ಆಂತರಿಕ ತರಬೇತಿ ವೇಳಾಪಟ್ಟಿಗಳನ್ನು ತಯಾರಿಸಿರಲಿಲ್ಲ.
- 2017–22 ರಲ್ಲಿ ಇಲಾಖೆಯು 86 ಅಧಿಕಾರಿಗಳು /ಸಿಬ್ಬಂದಿಯನ್ನು (ತಾಂತ್ರಿಕ ಹುದ್ದೆಯಿಂದ 30 ತಾಂತ್ರಿಕೇತರ ಹುದ್ದೆಯಿಂದ 56) 256 ದಿನಗಳನ್ನು ಉಪಯೋಗಿಸಿಕೊಂಡು 39 ತರಬೇತಿ ಅವಧಿಗಳಿಗೆ ನಿಯೋಜಿಸಿದ್ದಿತು. ಇದರ ಪೈಕಿ 2017–20 ರಲ್ಲಿ 6 ದಿನಗಳಿಗೆ ತಾಂತ್ರಿಕ ವಿಷಯಗಳ ಮೇಲೆ 4 ತರಬೇತಿ ಅವಧಿಗಳಿಗೆ ತಾಂತ್ರಿಕ ಹುದ್ದೆಯಿಂದ 19 ಸಿಬ್ಬಂದಿಯು ನಿಯೋಜನೆಗೊಂಡಿದ್ದರು. 2020–22ರಲ್ಲಿ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿ ಸಿಬ್ಬಂದಿಯು ತರಬೇತಿ ಹೊಂದಿರಲಿಲ್ಲ ಇದು ಇಲಾಖೆಯು ಕೈಗೆತ್ತಿಕೊಂಡಿದ್ದ ಸಾಮರ್ಥ್ಯ ನಿರ್ಮಾಣ ಕ್ರಮಗಳ ಕೊರತೆಯನ್ನು ಸೂಚಿಸುತ್ತಿದ್ದಿತು.

ಎಲ್ಲಾ ತಾಂತ್ರಿಕ ಸಿಬ್ಬಂದಿಗೆ ತರಬೇತಿ ನೀಡುವ ಸಲುವಾಗಿ ಹಾಗೂ ಅವರುಗಳ ನೈಪುಣ್ಯತೆಯನ್ನು ಹೆಚ್ಚಳಗೊಳಿಸುವ ಸಲುವಾಗಿ ತಜ್ಞರುಗಳಿಂದ ಸಮರ್ಪಕ ಸಂಖ್ಯೆಯ ಕಾರ್ಯಗಾರಗಳನ್ನು

ವ್ಯವಸ್ಥೆಗೊಳಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು. (ಆಗಸ್ಟ್–2023).

ಇಲಾಖೆಯು ತನ್ನ ತಾಂತ್ರಿಕ ಸಿಬ್ಬಂದಿಗೆ ತರಬೇತಿ ನೀಡಲು ಮತ್ತು ಅವರ ಕೌಶಲ್ಯವನ್ನು ಸುಧಾರಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡದಿರುವುದು ಕಂಡುಬರುತ್ತದೆ

**ಶಿಫಾರಸ್ಸು 11:**

**ತಾಂತ್ರಿಕ ಹುದ್ದೆಯನ್ನು ಬಲಪಡಿಸುವ ಸಲುವಾಗಿ ಹಾಗೂ ಸಿಬ್ಬಂದಿಗೆ ನಿಯತಕಾಲಿಕ ತರಬೇತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸಮರ್ಪಕವಾದಂತಹ ಕಾರ್ಯನೀತಿಯನ್ನು ರೂಪಿಸತಕ್ಕದ್ದು.**

**ಖಾಸಗಿ ಸಹಭಾಗಿತ್ವದೊಂದಿಗೆ ಸಂರಕ್ಷಣಾ ಕಾಮಗಾರಿಗಳು**

**4.5.5** ಕರ್ನಾಟಕ ಸರ್ಕಾರವು 2002–03ರಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಸರ್ಕಾರದಿಂದ ಶೇಕಡ 40 ಹಾಗೂ ಖಾಸಗಿ ಸಹಭಾಗಿಗಳಿಂದ ಶೇಕಡ 40 ಹಾಗೂ ಸಾರ್ವಜನಿಕರಿಂದ ಶೇಕಡ 20ರ ಅನುಪಾತದಲ್ಲಿ ಹಣಕಾಸು ಹಂಚಿಕೆಯೊಂದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋಥಾನ (ಎಸ್‌ಡಿಎಂಡಿ) ಟ್ರಸ್ಟ್‌ನೊಂದಿಗೆ ಸಹಭಾಗಿತ್ವದಲ್ಲಿ ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ತನ್ನ ಅನುಮೋದನೆ ನೀಡಿತು (ನವಂಬರ್ 2001). ಶೇಕಡ 40ರಷ್ಟು ಸರ್ಕಾರದ ಪಾಲು ಸ್ಮಾರಕ ಒಂದಕ್ಕೆ ₹ 5.00 ಲಕ್ಷ ಅಥವಾ ಯೋಜನಾ ವೆಚ್ಚದ ಶೇಕಡ 40 ರಷ್ಟು, ಯಾವುದು ಕಡಿಮೆಯೋ ಅದು ಗರಿಷ್ಠ ಎಂಬ ಶರತ್ತನ್ನು ಸಹ ಸರ್ಕಾರಿ ಆದೇಶ ನಿರ್ದಿಷ್ಟಪಡಿಸಿತ್ತು. ಇದನ್ನು ಸ್ಮಾರಕ ಒಂದಕ್ಕೆ ₹ 10.00 ಲಕ್ಷ ಮೊತ್ತಕ್ಕೆ ಪರಿಷ್ಕರಿಸಲಾಯಿತು (ನವಂಬರ್ 2012)

ಟ್ರಸ್ಟು (ಎಸ್‌ಡಿಎಂಡಿ) 2002–03ರಿಂದ 2021–22ರ ಅವಧಿಯಲ್ಲಿ 256 ಸ್ಮಾರಕಗಳ ಸಂರಕ್ಷಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತು, ಅವುಗಳ ಪೈಕಿ ಮೇ 2022ರವರೆವಿಗೆ 185 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಿತು. ಉಳಿದ 71 ಕಾಮಗಾರಿಗಳು ಪ್ರಗತಿಯ ಅಡಿಯಲ್ಲಿದ್ದವು / ಸಾರ್ವಜನಿಕರಿಂದ ಹಣಕಾಸು ಒದಗಿಬಂದಿರಲಿಲ್ಲವಾದ್ದರಿಂದ ಅವುಗಳನ್ನು ಕೈಗೆತ್ತಿಕೊಂಡಿರಲಿಲ್ಲ. ಮಾರ್ಚ್ 2022ರಲ್ಲಿದ್ದಂತೆ ಸರ್ಕಾರದ ಪಾಲಾಗಿ ಟ್ರಸ್ಟಿಗೆ ₹ 10.71 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿದ್ದಿತು.



**ಛಾಯಾಚಿತ್ರ ಸಂಖ್ಯೆ 4.21 – ಮಂಡ್ಯ ಜಿಲ್ಲೆಯ ಕೃಷ್ಣ ರಾಜ ಪೇಟೆ ತಾಲ್ಲೂಕಿನ ಅಘಲಯದಲ್ಲಿನ ಶ್ರೀ ಮಲ್ಲೇಶ್ವರ ದೇವಸ್ಥಾನ – ಎಸ್‌ಡಿಎಂಡಿ ಟ್ರಸ್ಟಿನಿಂದ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲ ಸ್ಥಿತಿ.**



**ಛಾಯಾಚಿತ್ರ ಸಂಖ್ಯೆ 4.22 – ಮಂಡ್ಯ ಜಿಲ್ಲೆಯ ಕೃಷ್ಣ ರಾಜ ಪೇಟೆ ತಾಲ್ಲೂಕಿನ ಅಘಲಯದಲ್ಲಿನ ಶ್ರೀ ಮಲ್ಲೇಶ್ವರ ದೇವಸ್ಥಾನ – ಎಸ್‌ಡಿಎಂಡಿ ಟ್ರಸ್ಟಿನಿಂದ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಂಡ ನಂತರದ ಸ್ಥಿತಿ.**

ಮೇಲಿನ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಸರ್ಕಾರಿ ಆದೇಶದ[27] ಪೀಠಿಕೆಯು ಮುಜರಾಯಿ ಇಲಾಖೆಯ[28] ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುವಂತಹ ದೇವಸ್ಥಾನಗಳ ಸಂರಕ್ಷಣೆಯನ್ನು ಹೊರಗಿಟ್ಟಿದ್ದಿತಾದಾಗ್ಯೂ, 2017–18ರಿಂದ 2021–22ರ ಅವಧಿಯಲ್ಲಿ ಮುಜರಾಯಿ ಇಲಾಖೆಯ ನಿಯಂತ್ರಣದಲ್ಲಿ ಬರುತ್ತಿದ್ದಂತಹ 13 ದೇವಸ್ಥಾನಗಳನ್ನು ***(ಅನುಬಂಧ–8)*** ಸಂರಕ್ಷಣೆಗಾಗಿ ಕೈಗೆತ್ತಿಕೊಳ್ಳಲಾಗಿದ್ದಿತು.

- ಟ್ರಸ್ಟು ಮಾಸಿಕ ಭೌತಿಕ ಮತ್ತು ಹಣಕಾಸು ಪ್ರಗತಿಯ ವರದಿಗಳನ್ನು ಸಲ್ಲಿಸುವುದನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು. ಮುಂದುವರೆದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾದಂತಹ ಸಂರಕ್ಷಣಾ ಕಾಮಗಾರಿಗಳನ್ನು ಇಲಾಖೆಯ ಅಧಿಕಾರಿಗಳು/ಇಂಜಿನಿಯರುಗಳು ಪರೀಕ್ಷಣೆ ಮಾಡುವ ಅಗತ್ಯತೆಯಿದ್ದಿತು. ಆದಾಗ್ಯೂ, ಇಲಾಖೆಯ ಅಧಿಕಾರಿಗಳು/ಇಂಜಿನಿಯರುಗಳು 2017–18ರಿಂದ 2021–22 ಸಾಲುಗಳಲ್ಲಿ ಈ ಕಾಮಗಾರಿಗಳನ್ನು ಪರೀಕ್ಷಣೆ ಮಾಡಿರಲಿಲ್ಲ. ಟ್ರಸ್ಟು ಯಾವುದೇ ಮಾಸಿಕ ಪ್ರಗತಿ ವರದಿಯನ್ನು 2020–21 ಮತ್ತು 2021–22 ಸಾಲುಗಳಲ್ಲಿ ಇಲಾಖೆಗೆ ಸಲ್ಲಿಸಿರಲಿಲ್ಲ.

ನಿರ್ವಹಣೆ/ಸಂರಕ್ಷಣೆಗಾಗಿ ಸಮರ್ಪಕ ಪ್ರಮಾಣದ ಹಣಕಾಸನ್ನು ಹೊಂದಿರದ ಹಾಗೂ ಶಿಥಿಲಾವಸ್ಥೆಯಲ್ಲಿ ಅಥವಾ ದುಸ್ಥಿತಿಯಲ್ಲಿರುವಂತಹ ಸಿ ದರ್ಜೆಯ ದೇವಸ್ಥಾನಗಳನ್ನು ಈ ಯೋಜನೆಯ ಅಡಿಯಲ್ಲಿ ಸಂರಕ್ಷಣೆಗಾಗಿ ಕೈಗೆತ್ತಿಕೊಳ್ಳಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023). ಮುಂದುವರೆದು, ಯೋಜನೆಯ ಅಡಿಯಲ್ಲಿ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವುದನ್ನು ಇಲಾಖಾ ಇಂಜಿನಿಯರುಗಳಿಗೆ ವಹಿಸಲಾಗಿರುವುದು ಎಂಬುದಾಗಿ ತಿಳಿಸಿತು.

ಮುಜರಾಯಿ ಇಲಾಖೆಯ ನಿಯಂತ್ರಣದಲ್ಲಿರುವಂತಹ ದೇವಸ್ಥಾನಗಳಿಗೆ ಸಂಬಂಧಿತ ಕಾಮಗಾರಿಗಳನ್ನು ಕೈಗೊಳ್ಳುವುದನ್ನು ನಿರ್ದಿಷ್ಟವಾಗಿ ಕೈಬಿಟ್ಟಿದ್ದಂತಹ ಪ್ರಸ್ತಾವನೆಯ ಮೇಲೆ ಸರ್ಕಾರಿ ಆದೇಶವು ಅವಲಂಭಿಸಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

[27] ದಿನಾಂಕ 19.11.2001.

[28] ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯನ್ನು ಮುಜರಾಯಿ ಇಲಾಖೆಯೆಂಬುದಾಗಿಯು ಕರೆಯಲಾಗುವುದು.

**ಖಾಸಗಿ ಮಾಲೀಕರುಗಳೊಂದಿಗೆ ಒಡಂಬಡಿಕೆಗಳು**

**4.5.6** ಸ್ಮಾರಕಗಳ ನಿರ್ವಹಣೆಗಾಗಿ ಒಂದು ನಿರ್ದಿಷ್ಟ ಅವಧಿಯ ಒಳಗೆ ಜಿಲ್ಲಾಧಿಕಾರಿಯವರು ಸಂರಕ್ಷಿತ ಸ್ಮಾರಕದ ಮಾಲೀಕರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ಸಲುವಾಗಿ ಅಧಿನಿಯಮದ *ಪರಿಚ್ಛೇದ 6* ಅನುವು ಮಾಡಿರುವುದು. ಒಡಂಬಡಿಕೆಯು ಸ್ಮಾರಕದ ಸುಪರ್ದು, ಅದನ್ನು ಗಮನಿಸುವ ಸಲುವಾಗಿ ನೇಮಕ ಮಾಡಲಾಗುವಂತಹ ಯಾವುದೇ ವ್ಯಕ್ತಿಯ ಕರ್ತವ್ಯಗಳು ಹಾಗೂ ಮಾಲೀಕರ ಹಕ್ಕಿನ ಮೇಲಿನ ನಿರ್ಬಂಧಗಳನ್ನು ಅನುವು ಮಾಡಿರತಕ್ಕದ್ದು.

ರಾಜ್ಯದಲ್ಲಿನ 844 ಅಧಿಸೂಚಿತ ಸ್ಮಾರಕಗಳ ಪೈಕಿ 839 ಸ್ಮಾರಕಗಳ ಮಾಲೀಕತ್ವವು ಸರ್ಕಾರದೊಂದಿಗೆ ಇರುವುದು ಹಾಗೂ ಉಳಿದ ಐದು ಸ್ಮಾರಕಗಳು, ಅವೆಂದರೆ ಮಾಯಕೊಂಡದಲ್ಲಿನ ಮದಕರಿನಾಯಕ ಸಮಾಧಿ, ಜಮಖಂಡಿಯಲ್ಲಿನ ರಾಮತೀರ್ಥ ಅರಮನೆ, ಇಂಡಿಯಲ್ಲಿನ ಸಂಗಮೇಶ್ವರ ದೇವಸ್ಥಾನ, ಉಡುಪಿಯಲ್ಲಿನ ಸುರಲು ಮಣ್ಣಿನ ಅರಮನೆ ಮತ್ತು ಯಳಂದೂರಿನಲ್ಲಿರುವ ದಿವಾನ್ ಪೂರ್ಣಯ್ಯ ಜಹಗೀರ್ ಬಂಗಲೆ, ಇವುಗಳು ಖಾಸಗಿ ಮಾಲೀಕತ್ವದಲ್ಲಿರುವವು.

ಇಲಾಖೆಯು ದಿವಾನ್ ಪೂರ್ಣಯ್ಯ ಬಂಗಲೆಗಾಗಿ 33 ವರ್ಷಗಳ ಅವಧಿಗೆ ಮಾಲೀಕರೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿತು (ನವಂಬರ್ 2011ರಲ್ಲಿ ಗುತ್ತಿಗೆ ಒಡಂಬಡಿಕೆ) ಹಾಗೂ ಅದನ್ನು ಸರ್ಕಾರಿ ವಸ್ತುಸಂಗ್ರಹಾಲಯವನ್ನಾಗಿ ಪರಿವರ್ತಿಸಿತು (ಅಕ್ಟೋಬರ್ 2012). ಆದಾಗ್ಯೂ, ಇತರೆ ನಾಲ್ಕು ಸ್ಮಾರಕಗಳ ಮಾಲೀಕರುಗಳೊಂದಿಗೆ ಹತ್ತು ವರ್ಷಗಳೇ ಕಳೆದರೂ ಮಾಲೀಕರುಗಳೊಂದಿಗೆ ಯಾವುದೇ ಒಡಂಬಡಿಕೆಯನ್ನು ಮಾಡಿಕೊಂಡಿರುವುದಿಲ್ಲ.



**ಛಾಯಾಚಿತ್ರ ಸಂಖ್ಯೆ 4.23: ಖಾಸಗಿ ವ್ಯಕ್ತಿಗಳ ಮಾಲೀಕತ್ವದಲ್ಲಿರುವಂತಹ ಜಮಖಂಡಿಯಲ್ಲಿನ ಅಧಿಸೂಚಿತ ರಾಮತೀರ್ಥ ಅರಮನೆ.**

ನಾಲ್ಕು ಖಾಸಗಿ ಸ್ಮಾರಕಗಳ ಮಾಲಿಕರುಗಳೊಂದಿಗೆ ಒಡಂಬಡಿಕೆ[29] ಮಾಡಿಕೊಳ್ಳಲು ಸರ್ಕಾರವು ಒಪ್ಪಿಕೊಂಡಿದ್ದಿತಾದರೂ (ಡಿಸೆಂಬರ್ 2011) ಈ ನಿಟ್ಟಿನಲ್ಲಿ ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಒಡಂಬಡಿಕೆಗಳ ಅನುಪಸ್ಥಿತಿಯಲ್ಲಿ, ಖಾಸಗಿ ಮಾಲಿಕರುಗಳ ಮೇಲೆ ನಿರ್ಬಂಧಗಳನ್ನು ವಿಧಿಸಲು ಇಲಾಖೆಗೆ ಯಾವುದೇ ಕಾನೂನಾತ್ಮಕ ಆಯ್ಕೆಗಳು ಇರುವುದಿಲ್ಲ.

ಮುಂದಿನ ದಿನಗಳಲ್ಲಿನ ಸಂರಕ್ಷಣಾ ಯೋಜನೆಗಳಲ್ಲಿ ಖಾಸಗಿ ತಂಡಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023).

[29] 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ಸಾಲಿಗೆ ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ವರದಿ ಸಂಖ್ಯೆ 2ರ (ಸಿವಿಲ್) ಕಂಡಿಕೆ 2.3.9.1ಕ್ಕೆ ನೀಡಲಾಗಿದ್ದ ಉತ್ತರ.

25 ವರ್ಷಗಳ ನಂತರವೂ ಇಲಾಖೆಯು ನಾಲ್ಕು ಸ್ಮಾರಕಗಳ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲದಿರುವುದು (1992 ರಿಂದ 1997 ರ ಅವಧಿಯಲ್ಲಿ ಸೂಚಿಸಲಾಗಿದೆ) ವಾಸ್ತವವಾಗಿದೆ.

**ಸಂರಕ್ಷಣಾ ಕಾಮಗಾರಿಗಳಿಗೆ ಲಾಗ್ ಪುಸ್ತಕಗಳನ್ನು ನಿರ್ವಹಿಸದಿರುವುದು**

**4.5.7** ಪ್ರಾಚೀನ ಪುರಾತತ್ವ ಸ್ಮಾರಕಗಳಿಗಾಗಿ ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ ಕಂಡಿಕೆ 4.09ರ ಅನುಸಾರ, ಸಂರಕ್ಷಣೆಯ ಸಂಪೂರ್ಣ ಪ್ರಕ್ರಿಯೆಯನ್ನು ಮಧ್ಯಸ್ಥಿಕೆಗಳ ಅವಿರತ ದಾಖಲೆಗಳನ್ನು ಸೃಷ್ಟಿಸುವ ರೀತಿಯಲ್ಲಿ ಸಂರಕ್ಷಣೆಯ ಪೂರ್ವದ, ಸಂರಕ್ಷಣೆಯ ವೇಳೆಯಲ್ಲಿ ಹಾಗೂ ಅದರ ನಂತರದಲ್ಲಿ, ನಕಾಶೆಗಳಲ್ಲಿ, ರೇಖಾಚಿತ್ರಗಳಲ್ಲಿ, ಛಾಯಾಚಿತ್ರಗಳಲ್ಲಿ ಡಿಜಿಟಲ್ ದಾಖಲೆಗಳಲ್ಲಿ ಮತ್ತು ಕ್ಷೇತ್ರ ಟಿಪ್ಪಣಿಗಳಲ್ಲಿ ಮುಂತಾದ ದಾಖಲೆಗಳಲ್ಲಿ ನಿರ್ವಹಿಸತಕ್ಕದ್ದು. ಈ ಹಿಂದಿನ ಹಾಗೂ ಪ್ರಗತಿಯಲ್ಲಿರುವ ಸಂರಕ್ಷಣಾ ಕಾಮಗಾರಿಗಳಿಗೆ ಸಂಬಂಧಿತ ಎಲ್ಲಾ ಮಾಹಿತಿಯನ್ನು ಈ ಹಿಂದಿನ ಎಲ್ಲಾ ಮಧ್ಯಸ್ತಿಕೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯೋಜನಕ್ಕಾಗಿ ನಿವೇಶನ ಕಚೇರಿಯಲ್ಲಿ ಲಭ್ಯವಿರುವಂತೆ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಎಲ್ಲಾ ಸ್ಮಾರಕಗಳಿಗಾಗಿ ನಿವೇಶನಗಳಲ್ಲಿ ಲಾಗ್ ಪುಸ್ತಕಗಳನ್ನು ನಿರ್ವಹಿಸುವ ಪರಿಪಾಠವನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು. ಇಲಾಖೆಯು ತನ್ನ ನಿಯಂತ್ರಣದಲ್ಲಿದ್ದಂತಹ ಸ್ಮಾರಕಗಳಲ್ಲಿ ನಡೆಸಿಕೊಂಡು ಹೋಗಲಾಗಿದ್ದಂತಹ ಸಂರಕ್ಷಣಾ ಕಾಮಗಾರಿಗಳ ಪ್ರಕ್ರಿಯೆಗಳನ್ನು ವಿವರಿಸಿದಂತೆ ಲಾಗ್ ಪುಸ್ತಕಗಳನ್ನು ನಿರ್ವಹಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಲಾಗ್ ಪುಸ್ತಕದ ಅನುಪಸ್ಥಿತಿಯಲ್ಲಿ, ಸಂಬಂಧಿತ ಸ್ಮಾರಕಗಳ ಮೇಲೆ ಕೈಗೊಳ್ಳಲಾಗಿದ್ದಂತಹ ಹಿಂದಿನ ಕಾಮಗಾರಿಗಳಿಗೆ ಸಂಬಂಧಿತ ಮಾಹಿತಿಯು ಇಲಾಖೆಯಲ್ಲಿ ತತ್‌ಕ್ಷಣದಲ್ಲಿ ಲಭ್ಯವಿರಲಿಲ್ಲ. ಅಗತ್ಯ ದಾಖಲೀಕರಣದ ಅನುಪಸ್ಥಿತಿಯು ಅಸಮರ್ಪಕ ಮತ್ತು ಅಪೂರ್ಣ ಸಂರಕ್ಷಣಾ ಪೂರ್ವಭಾವಿ ಯೋಜನೆಯನ್ನು ತಯಾರಿಸುವಲ್ಲಿ ಪರಿಣಮಿಸಬಹುದು.

ಪ್ರತಿಯೊಂದು ಸಂರಕ್ಷಿತ ಸ್ಮಾರಕಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಲಾಗ್ ಪುಸ್ತಕವನ್ನು ನಿರ್ವಹಿಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023).

**ಸ್ಮಾರಕಗಳ ಸಂರಕ್ಷಣೆಗಾಗಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರುಗಳನ್ನು ಆಹ್ವಾನಿಸುವ ಹಾಗೂ ಕಾಮಗಾರಿಗಳನ್ನು ನೀಡುವ ಪ್ರಕ್ರಿಯೆಗಳಲ್ಲಿನ ಅಸಮರ್ಪಕತೆಗಳು**

**4.5.8** ಇಲಾಖೆಯು ನಾಮನಿರ್ದೇಶನ ಹಾಗೂ ಇ–ಟೆಂಡರು ಮತ್ತು ಕೊಟೇಷನ್ನುಗಳನ್ನು ಆಹ್ವಾನಿಸುವ ಆಧಾರದ ಮೇರೆಗೆ ವಿವಿಧ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಂಡಿತು. ಈ ಮೊದಲು ತಿಳಿಸಿರುವಂತೆ, 2017–2022ರ ಅವಧಿಯಲ್ಲಿ ಇಲಾಖೆಯು 154 ಸಂರಕ್ಷಣಾ ಕಾಮಗಾರಿಗಳ ಮೇಲೆ ₹ 37.05 ಕೋಟಿ ಮೊತ್ತವನ್ನು ಭರಿಸಿರುವುದು. ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಎಂಟು ಜಿಲ್ಲೆಗಳಲ್ಲಿ ₹ 9.15 ಕೋಟಿ ಮೊತ್ತದಷ್ಟು 23 ಕಾಮಗಾರಿಗಳಿಗೆ ಸಂಬಂಧಿತ ದಾಖಲೆಗಳನ್ನು ಸಮೀಕ್ಷಿಸಿತು ಹಾಗೂ ಈ ಕೆಳಗಿನ ಅಸಮರ್ಪಕತೆಗಳನ್ನು ಗಮನಿಸಲಾಯಿತು:

- ಇಲಾಖೆಯು ಕಾಮಗಾರಿಯ ಹೆಸರು, ಅಂದಾಜು ವೆಚ್ಚ, ಗುತ್ತಿಗೆದಾರರ ಹೆಸರು, ಟೆಂಡರಿನ ಮಾದರಿ, ಕಾಮಗಾರಿಯನ್ನು ಗುತ್ತಿಗೆದಾರರಿಗೆ ಯಾವ ಮೊತ್ತಕ್ಕೆ ನೀಡಲಾಗಿದ್ದಿತು, ಕಾಮಗಾರಿ ಆದೇಶ/ಗುತ್ತಿಗೆ ಉಲ್ಲೇಖ, ಗುತ್ತಿಗೆ ಅವಧಿ, ಪೂರ್ಣಗೊಳಿಸಲು ನಿಗದಿತ ದಿನಾಂಕ, ಕಾಮಗಾರಿಯು ಪೂರ್ಣಗೊಂಡಂತಹ ವಾಸ್ತವಿಕ ದಿನಾಂಕ, ಇತ್ಯಾದಿ ವಿವರಗಳನ್ನು ಸೂಚಿಸಿದಂತೆ ಒಂದು ಕಾಮಗಾರಿ ರಿಜಿಸ್ಟರನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ (ಕೆಪಿಡಬ್ಲ್ಯುಡಿ ಕೋಡು) ಅಡಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ ನಿರ್ವಹಿಸಿರಲಿಲ್ಲ. ಅಲ್ಲದೆಯೇ, ಇಲಾಖೆಯು ಸಂರಕ್ಷಾಣಾ ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡಿಕೆ ಹಾಗೂ ಅವುಗಳ ಕಾರ್ಯಗತಗೊಳಿಸುವ ಸಲುವಾಗಿ ಯಾವುದೇ ನಿರ್ಧಿಷ್ಟ ಕಾಮಗಾರಿಗಳ ಕೈಪಿಡಿಯನ್ನು ಹೊಂದಿರಲಿಲ್ಲ.

- ಕಾರ್ಯಗತಗೊಳಿಸಲಾದಂತಹ ಏಳು ಕಾಮಗಾರಿಗಳಲ್ಲಿ[30], ದರಗಳ ಸವಾಲುಗಳನ್ನು ಮೌಲ್ಯಮಾಪನ ಮಾಡಿದನಂತರ ತಯಾರಿಸಲಾದಂತಹ ದರ ತುಲನಾತ್ಮಕ ತ:ಖ್ತೆಗೆ ದಿನಾಂಕವನ್ನು ನಮೂದಿಸಿರಲಿಲ್ಲ. ಅಲ್ಲದೆಯೇ, ತಾಂತ್ರಿಕ / ಹಣಕಾಸು ದರ ಸವಾಲುಗಳನ್ನು ತೆರೆದ ವಾಸ್ತವಿಕ ದಿನಾಂಕವನ್ನೂ ಸಹ ತುಲನಾತ್ಮಕ ತ:ಖ್ತೆಯಲ್ಲಿ ನಮೂದಿಸಿರಲಿಲ್ಲ.

- ದಾಖಲೆಗಳ ಸಾಮಾನ್ಯ ಷರತ್ತುಗಳು ಮತ್ತು ನಿಬಂಧನೆಗಳು ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿನ ವಿಳಂಬಕ್ಕಾಗಿ ಸಮಾಪನ ನಷ್ಟಗಳನ್ನು ವಿಧಿಸುವುದನ್ನು ಚಿಂತಿಸಿರುತ್ತವೆ ಹಾಗೂ ಅದು ಯಶಸ್ವಿ ಸವಾಲುದಾರರುಗಳೊಂದಿಗೆ ಮಾಡಿಕೊಳ್ಳಲಾಗುವ ಒಡಂಬಡಿಕೆಯ ಭಾಗವಾಗಿರುತ್ತದೆ. 11 ಗುತ್ತಿಗೆಗಳಲ್ಲಿ ***(ಅನುಬಂಧ 9)*** ಆರು ತಿಂಗಳುಗಳಿಂದ 44 ತಿಂಗಳುಗಳ ವಿಳಂಬವನ್ನು ಗಮನಿಸಲಾಯಿತು, ಆದರೆ ಅಂತಹ ವಿಳಂಬಗಳಿಗೆ ನಿರ್ದಿಷ್ಟ ಕಾರಣಗಳು ಹಾಗೂ ಸಮಾಪನ ನಷ್ಟಗಳನ್ನು ವಸೂಲಾತಿ ಮಾಡದಿರಲು ಕಾರಣಗಳನ್ನು ದಾಖಲಿಸಿರಲಿಲ್ಲ. ನಿರ್ದಿಷ್ಟ ದಂಡ ವಿಧಿಸುವಿಕೆ ಷರತ್ತಿನ ಅನುಪಸ್ಥಿತಿಯಲ್ಲಿ, ಲೆಕ್ಕಪರಿಶೋಧನೆಯು ಹಣಕಾಸಿನ ಪ್ರಭಾವವನ್ನು ನಿರ್ಧಾರಣೆ ಮಾಡಲಾಗಲಿಲ್ಲ.

- ಕಾಮಗಾರಿ ರಿಜಿಸ್ಟರುಗಳನ್ನು 2023–24 ಸಾಲಿನಿಂದ ನಿರ್ವಹಿಸಲಾಗುವುದು ಹಾಗೂ ಕಾಮಗಾರಿಗಳ ಸಮಯೋಚಿತ ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಟೆಂಡರುಗಳ ಅನುವುಗಳನ್ನು ಅನುಸರಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023). ಇಲಾಖೆಯು ಟೆಂಡರು ಅನುವುಗಳನ್ನು ಜಾರಿಗೊಳಿಸುವಲ್ಲಿ ಹಾಗೂ ವಿಳಂಬವಾಗಿ ಕಾರ್ಯಗತಗೊಳಿಸಲಾಗಿರುವಂತಹ ಕಾಮಗಾರಿಗಳಿಗಾಗಿ ದಂಡವನ್ನು ವಿಧಿಸುವಲ್ಲಿ ವಿಫಲಗೊಂಡಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

**ಶಿಫಾರಸ್ಸು 12:**

**ಇಲಾಖೆಯ ಗುತ್ತಿಗೆಯ ಅನುವುಗಳನ್ನು ಪಾಲಿಸಿ ಕೈಗೆತ್ತಿಕೊಳ್ಳಲಾದ ಸಂರಕ್ಷಣಾ ಕಾಮಗಾರಿಗಳು ಸಕಾಲಕ್ಕೆ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು.**


**ಸಂರಕ್ಷಣಾ ಕಾಮಗಾರಿಯಲ್ಲಿ ಸಾಂಪ್ರದಾಯಿಕ ಸಾಮಗ್ರಿಗಳನ್ನು ಉಪಯೋಗಿಸುವಲ್ಲಿನ ವಿಫಲತೆ**

**4.5.9** ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ಸಂರಕ್ಷಣಾ ಕೈಪಿಡಿಯ (ಕ್ರಮ ಸಂಖ್ಯೆ 95) ಅನುಸಾರ, ಅದು ಪುರಾತತ್ವ ನಿರ್ಮಾಣಕ್ಕೆ ಆಧುನಿಕ ಟಿಪ್ಪಣಿಯನ್ನು ನೀಡುತ್ತದೆಯಾದ್ದರಿಂದ ಸಂರಕ್ಷಣಾ ಕಾಮಗಾರಿಯಲ್ಲಿ ಸಿಮೆಂಟಿನ ಬಳಕೆಯನ್ನು ಪ್ರತಿಬಂಧಿಸಲಾಗಿರುವುದು. ಸ್ಮಾರಕಗಳ ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಸಂರಕ್ಷಣಾ ಕಾಮಗಾರಿಗಳನ್ನು ಆಧುನಿಕ ತಂತ್ರಜ್ಞಾನಗಳು ಮತ್ತು ಸಾಮಗ್ರಿಗಳನ್ನು ಉಪಯೋಗಿಸುವ ಮೂಲಕ ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು, ಪುರಾತತ್ವ ನಿರ್ಮಾಣಗಳಲ್ಲಿನ ಸೌಂದರ್ಯವನ್ನು ವಿವೇಚನಾ ಶೂನ್ಯವಾಗಿ ವಿರೂಪಗೊಳಿಸುವಲ್ಲಿ ಪರಿಣಮಿಸಿದ್ದಿತು. ಪ್ರಾಚೀನ ಸ್ಮಾರಕಗಳಲ್ಲಿ ಸಿಮೆಂಟನ್ನು ಉಪಯೋಗಿಸಿರುವ ಉದಾಹರಣೆಗಳನ್ನು ಈ ಕೆಳಗೆ ತೋರಿಸಲಾಗಿರುವುದು:

[30] ಶ್ರೀ ರಾಮೇಶ್ವರ ದೇವಸ್ಥಾನ, ಚಿತ್ತೂರು ಗ್ರಾಮ, ಸೊರಬ ತಾಲ್ಲೂಕು; ಶಿವಪನಾಯ ಮತ್ತು ಕುಟುಂಬದವರ ಸಮಾಧಿ, ಬಿದನೂರು, ಹೊಸನಗರ ತಾಲ್ಲೂಕು, ಶ್ರೀ ಶಿವಲಿಂಗೇಶ್ವರ ದೇವಸ್ಥಾನ, ಚೆನ್ನಗಿರಿ ತಾಲ್ಲೂಕು; ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಜಾವಗಲ್, ಅರಸೀಕೆರೆ ತಾಲ್ಲೂಕು; ಶ್ರೀ ಲಕ್ಷ್ಮಣೇಶ್ವರ ದೇವಸ್ಥಾನ, ಅರಕಲಗೂಡು ತಾಲ್ಲೂಕು, ಶ್ರೀ ವೀರಭದ್ರೇಶ್ವರ/ಶ್ರೀ ಕಲ್ಮೇಶ್ವರ ದೇವಸ್ಥಾನಗಳು, ಶಿಡಿನೂರು, ಬ್ಯಾಡಗಿ ತಾಲ್ಲೂಕು ಮತ್ತು ಶ್ರೀ ಕಲ್ಮೇಶ್ವರ ದೇವಸ್ಥಾನ, ಹಿರೇಮನಿಕಟ್ಟಿ, ಶಿಗ್ಗಾಂವಿ ತಾಲ್ಲೂಕು.




**ಛಾಯಾಚಿತ್ರ ಸಂಖ್ಯೆ 4.24 : ಕೃಷ್ಣ ರಾಜ ನಗರ ತಾಲ್ಲೂಕಿನ ಮಿರ್ಲೆಯಲ್ಲಿನ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಬಿರುಕುಗಳನ್ನು ಭರ್ತಿ ಮಾಡುವ ಸಲುವಾಗಿ ಸಿಮೆಂಟಿನ ಬಳಕೆ ಮಾಡಿರುವುದು.**




**ಛಾಯಾಚಿತ್ರ ಸಂಖ್ಯೆ 4.25: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರಿನಲ್ಲಿ ಶ್ರೀ ಕಲ್ಮೇಶ್ವರ ದೇವಸ್ಥಾನದಲ್ಲಿ ಸ್ಮಾರಕದ ಮೇಲಿನ ನಿರ್ಮಾಣಕ್ಕೆ ಪ್ಲಾಸ್ಟರಿಂಗಿಗಾಗಿ ಸಿಮೆಂಟಿನ ಬಳಕೆ ಮಾಡಿರುವುದು.**




**ಛಾಯಾಚಿತ್ರ ಸಂಖ್ಯೆ 4.26 : ಕಲಬುರಗಿ ಜಿಲ್ಲೆಯ ಹೋಡಲಿನಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹಾಳಾಗಿರುವಂತಹ/ಹಾನಿಗೊಳಗಾಗಿರುವಂತಹ ನಂದಿ ವಿಗ್ರಹದ ರಿಪೇರಿಯಲ್ಲಿ ಸಿಮೆಂಟಿನ ಬಳಕೆ ಮಾಡಿರುವುದು.**




**ಛಾಯಾಚಿತ್ರ ಸಂಖ್ಯೆ 4.27: ಕಲಬುರಗಿ ಜಿಲ್ಲೆಯ ಅಫಝಲಪುರ ತಾಲ್ಲೂಕಿನ ಅಫಝುಲಖಾನ್ ಸಮಾಧಿ ಮತ್ತು ಮಸೀದಿಯಲ್ಲಿ ಹಾಳಾಗಿರುವಂತಹ/ ಹಾನಿಗೊಳಗಾಗಿರುವಂತಹ ಪುಷ್ಪ ವಿನ್ಯಾಸದ ಪುನರ್–ನಿರ್ಮಾಣಕ್ಕಾಗಿ ಸಿಮೆಂಟಿನ ಬಳಕೆ ಮಾಡಿರುವುದು.**

ಸಂರಕ್ಷಣಾ ಕಾಮಗಾರಿಯಲ್ಲಿ ಸಿಮೆಂಟಿನ ಬಳಕೆಯು ಈ ಸ್ಮಾರಕಗಳ ಚಾರಿತ್ರಿಕ ಮೌಲ್ಯವನ್ನು ವಿಕೃತಗೊಳಿಸಿದ್ದಿತು. ಅನೇಕ ಪ್ರಕರಣಗಳಲ್ಲಿ, ಸಂರಕ್ಷಿತ ಸ್ಮಾರಕಗಳಿಗೆ ಬದಲಿ ವ್ಯವಸ್ಥೆಗಳನ್ನು ಇಲಾಖೆಯ ಅನುಮೋದನೆ ಇಲ್ಲದೆಯೇ ಸ್ಥಳೀಯ ಜನತೆಯು ಮಾಡಿದ್ದರು. ಇದು ಇಲಾಖೆಯ ಮೇಲ್ವಿಚಾರಣಾ ವ್ಯವಸ್ಥೆಯ ವಿಫಲತೆಯನ್ನು ಸೂಚಿಸುತ್ತಿದ್ದಿತು.

ಸಂರಕ್ಷಣಾ ಕಾಮಗಾರಿಗಳನ್ನು ನಿರ್ದಿಷ್ಟ ಸಂರಕ್ಷಣಾ ಪ್ರಮಾಣಕಗಳ ಅನುಸಾರ ಆಧುನಿಕ ತಂತ್ರಜ್ಞಾನ ಅಥವಾ ಸಾಮಗ್ರಿಗಳನ್ನು ಉಪಯೋಗಿಸದೆಯೇ ನಡೆಸಿಕೊಂಡು ಹೋಗುವಂತೆ ನಿರ್ದೇಶನಗಳನ್ನು ನೀಡಲಾಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023). ಆಧುನಿಕ ಸಾಮಗ್ರಿಗಳನ್ನು ಉಪಯೋಗಿಸಿದ್ದರ ಕಾರಣ ಈಗಾಗಲೇ ಖಾಯಂ ಹಾನಿಯಾಗಿರುವುದರಿಂದ, ಹಾನಿಗೆ ಇಲಾಖೆಯು ಕಾರಣವಾಗಿರುವುದರಿಂದ ಉತ್ತರವು ಒಪ್ಪುವಂತಿಲ್ಲ.

**ಸಂರಕ್ಷಿತ ಸ್ಮಾರಕಗಳನ್ನು ನಿರ್ವಹಿಸದಿರುವುದು**

**4.5.10** ಸ್ಮಾರಕದ ನಿರ್ವಹಣೆಯು ಇತರ ವಿಷಯಗಳ ನಡುವೆ, (i) ಸ್ಮಾರಕದ ಸುತ್ತಲೂ ನಿಗಾವಣೆ ಮತ್ತು ರಕ್ಷಣೆ ಮತ್ತು ಬೇಲಿಗಳನ್ನು ಒದಗಿಸುವ ಮೂಲಕ ಮಾನವ/ಪ್ರಾಣಿಗಳ ಪ್ರವೇಶದಿಂದ ರಕ್ಷಣೆಯನ್ನು ಒಳಗೊಂಡಿರುತ್ತದೆ (ii) ಸ್ಮಾರಕದ ಮೇಲಿನ ಸಸ್ಯವರ್ಗದ ಬೆಳವಣಿಗೆಯನ್ನು ಸ್ವಚ್ಛಗೊಳಿಸುವುದು/ತೆಗೆದುಹಾಕುವುದು ಮತ್ತು (iii) ಉದ್ಯಾನಗಳ ಅಭಿವೃದ್ಧಿ ಮತ್ತು ಪ್ರವಾಸಿ ಸೌಕರ್ಯಗಳಒದಗಿಸುವಿಕೆಯನ್ನು ಒಳಗೊಂಡಿರುತ್ತದೇ. 2017–2022ರಲ್ಲಿ ಸಂರಕ್ಷಿತ ಸ್ಮಾರಕಗಳ ನಿರ್ವಹಣೆಗಾಗಿ ಮೀಸಲಿರಿಸಲಾಗಿದ್ದಂತಹ ₹ 39.00 ಲಕ್ಷ ಮೊತ್ತದ ಪ್ರತಿಯಾಗಿ, ಇಲಾಖೆಯು ₹ 2.68 ಲಕ್ಷ ಮೊತ್ತವನ್ನು ಸರ್ಕಾರಕ್ಕೆ ಹಿಂಪಾವತಿಸಿದ್ದಿತಾದ್ದರಿಂದ, ಸಂರಕ್ಷಿತ ಸ್ಮಾರಕಗಳ ನಿರ್ವಹಣೆಯ ಕಡೆಗೆ ಮಂಜೂರು ಮಾಡಿದ್ದಂತಹ ಅತ್ಯಲ್ಪ ಪ್ರಮಾಣದ ಮೊತ್ತವನ್ನು ಸಂಪೂರ್ಣವಾಗಿ ಉಪಯೋಗಿಸುವಲ್ಲಿ ಇಲಾಖೆಯು ವಿಫಲಗೊಂಡಿದ್ದಿತು.

ಉಳಿದ ₹ 36.32 ಲಕ್ಷ ಮೊತ್ತವನ್ನು ನಾಲ್ಕು ಜಿಲ್ಲೆಗಳಲ್ಲಿ (ದಾವಣಗೆರೆ, ಬಳ್ಳಾರಿ, ಹಾಸನ ಮತ್ತು ಗದಗ) ಕೆಲವು ದೇವಸ್ಥಾನಗಳಲ್ಲಿ ಮಾತ್ರ ಸಸ್ಯ ತೋಟಗಳ ಕಡೆಗೆ (₹ 21.33 ಲಕ್ಷ) ಭರಿಸಲಾಗಿದ್ದಿತು ಹಾಗೂ ಮೈಸೂರಿನ ಜಿಲ್ಲಾಧಿಕಾರಿಯವರ ಕಚೇರಿಯ ರಿಪೇರಿ ಮತ್ತು ಮೇಲ್ದರ್ಜೆಗೇರಿಸುವಿಕೆ

ಕಾಮಗಾರಿಗಳಿಗಾಗಿ (₹ 14.99 ಲಕ್ಷ) ಭರಿಸಲಾಗಿದ್ದಿತು. ತತ್ಪರಿಣಾಮವಾಗಿ, ಸಂರಕ್ಷಿತ ಸ್ಮಾರಕಗಳ ನಿರ್ವಹಣೆಯ ಮೇಲೆ ಯಾವುದೇ ವೆಚ್ಚವನ್ನೂ ಭರಿಸಿರಲಿಲ್ಲ.

ಕೋವಿಡ್–19 ಪ್ಯಾಂಡಮಿಕ್ ಕಾರಣ, ಸಂಪೂರ್ಣ ಮೊತ್ತವನ್ನು 2019–21ರಲ್ಲಿ ಉಪಯೋಗಿಸಿಕೊಳ್ಳಲಾಗಲಿಲ್ಲ ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್ 2023). ಇಲಾಖೆಯು ಅತ್ಯಲ್ಪ ಸಂಖ್ಯೆಯ ಸಿಬ್ಬಂದಿಯೊಂದಿಗೆ ಮತ್ತು ಸೀಮಿತ ಸಂಪನ್ಮೂಲಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದಿತು ಹಾಗೂ ಹಣಕಾಸಿನ ಕೊರತೆಯ ಕಾರಣ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಸಂರಕ್ಷಿತ ಸ್ಮಾರಕಗಳನ್ನು ಸ್ವಚ್ಛಗೊಳಿಸುವುದು, ತೋಟಗಳ ನಿರ್ವಾಹಣೆ ಮತ್ತು ಹಸಿರು ಗಿಡಮರಗಳ ಬೇಲಿ ಹಾಕುವ ಸಲುವಾಗಿ ಒಂದು ಜಂಟಿ ಸುತ್ತೋಲೆಯನ್ನು ನೀಡಲಾಗಿರುವುದು. ಸರ್ಕಾರಕ್ಕೆ ಹಿಂಪಾವತಿಸಲಾದಂತಹ ಹಣಕಾಸು 2017–18 ಸಾಲಿಗೆ ಸಂಬಂಧಿಸಿದ್ದರಿಂದ ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ[31] ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

**ಸಂರಕ್ಷಿತ ಸ್ಮಾರಕಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಹಾಗೂ ನಿರ್ವಹಿಸಿಕೊಂಡು ಹೋಗುವಲ್ಲಿನ ವಿಫಲತೆ**

**4.5.11** ಒಂದು ಸಂರಕ್ಷಿತ ಸ್ಮಾರಕವು ಹಾಳಾಗುವ, ಹಾನಿಗೊಳ್ಳುವ, ದುರುಪಯೋಗಗೊಳ್ಳುವ ಅಥವಾ ಬಿದ್ದುಹೋಗುವ ಅಪಾಯದಲ್ಲಿರುವುದಾಗಿ ನಿರೀಕ್ಷಿಸಿದಲ್ಲಿ ಸಂರಕ್ಷಿತ ಸ್ಮಾರಕದ ನಿರ್ವಹಣೆಯು ಆ ಅಧಿನಿಯಮದ ಅರ್ಥದ ಒಳಗೇ ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಆಗಿರುತ್ತದೆ ಎಂಬುದಾಗಿ ಭಾವಿಸಿ ಭೂಸ್ವಾಧೀನ ಅಧಿನಿಯಮ, 1894ರ ಅನುವುಗಳ ಅಡಿಯಲ್ಲಿ ಸಂರಕ್ಷಿತ ಸ್ಮಾರಕವನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಅಧಿನಿಯಮದ ಪರಿಚ್ಛೇದ 13 ಸರ್ಕಾರಕ್ಕೆ ಅಧಿಕಾರ ನೀಡಿರುತ್ತದೆ. ಮುಂದುವರೆದು ಸರ್ಕಾರವು ಸ್ವಾಧೀನಪಡಿಸಿಕೊಳ್ಳಲಾದಂತಹ ಪ್ರತಿಯೊಂದು ಸ್ಮಾರಕಗಳನ್ನು ಅಧಿನಿಯಮದ ಪರಿಚ್ಛೇದ 14ರ ಅಡಿಯಲ್ಲಿ ಸಂರಕ್ಷಿಸಿಕೊಂಡು ಹೋಗುವ ಅಗತ್ಯತೆ ಇರುತ್ತದೆ.

**13 ಸ್ಥಳಗಳು**

**15 ಸ್ಥಳಗಳು**

**ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ತೋರಿಸುವ ವಿಡಿಯೋವನ್ನು ವೀಕ್ಷಿಸಲು ಮೇಲಿನ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ**

ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಎರಡು ಸ್ಥಳಗಳಲ್ಲಿ[32] ಸ್ಮಾರಕಗಳು ಹಾಳಾಗಿರುವ ಸ್ಥಿತಿಯಲ್ಲಿ ಬಿದ್ದಿರುವುದನ್ನು ಹಾಗೂ 13 ಸ್ಥಳಗಳಲ್ಲಿ ಶಿಥಿಲಾವಸ್ಥೆಯಲ್ಲಿ / ಭಾಗಶಃ ಶಿಥಿಲಾವಸ್ಥೆಯಲ್ಲಿರುವುದನ್ನು ಗಮನಿಸಲಾಯಿತಾದ್ದರಿಂದ ಇಲಾಖೆಯು ಅಧಿನಿಯಮದ ಮೇಲಿನ ಅನುವುಗಳನ್ನು ಜಾರಿಗೊಳಿಸುವಲ್ಲಿ ವಿಫಲಗೊಂಡಿದ್ದಿತು ಎಂಬುದನ್ನು ಗಮನಿಸಲಾಯಿತು. 15 ಸ್ಥಳಗಳಲ್ಲಿ ಶಿಲಾಶಾಸನಗಳು ಯಾವುದೇ ಸಂರಕ್ಷಣೆಯೂ ಇಲ್ಲದೆಯೇ ಸುತ್ತಮುತ್ತಲ ಸ್ಥಳಗಳಲ್ಲಿ ಬಿದ್ದಿದ್ದವು .

[31] ಕೋಲಾರ, ಮೈಸೂರು ಮತ್ತು ಗದಗ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲಾಗಿದ್ದಿತು.

[32] ಬೆಳವಟ್ಟಿಯಲ್ಲಿ ಕೆತ್ತನೆಯ ಗೋಡೆಗಳು ಮತ್ತು ಐದು ಶಿಲಾಶಾಸನಗಳೊಂದಿಗೆ ಕಪ್ಪು ಕಲ್ಲಿನ ಗೋಕುಲೇಶ್ವರ ದೇವಸ್ಥಾನ ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಹೆರೂರಿನಲ್ಲಿ ಶಿಲಾಶಾಸನವನ್ನು ಹೊಂದಿರುವ ವೀರಗಲ್ಲಿನೊಂದಿಗೆ ಬಸಪ್ಪ ದೇವಸ್ಥಾನ.




**ಛಾಯಾಚಿತ್ರ ಸಂಖ್ಯೆ 4.28: ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಬೆಳವಟ್ಟಿಯಲ್ಲಿ ಶ್ರೀ ಗೋಕುಲೇಶ್ವರ ದೇವರ ಕರಿಕಲ್ಲಿನ ದೇವಸ್ಥಾನವು ಹಾಳಾಗಿರುವ ಸ್ಥಿತಿಯಲ್ಲಿರುವುದು.**




**ಛಾಯಾಚಿತ್ರ ಸಂಖ್ಯೆ 4.29: ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಹೆರೂರಿನಲ್ಲಿ ಬಸಪ್ಪ ದೇವಸ್ಥಾನವು ಹಾಳಾಗಿರುವ ಸ್ಥಿತಿಯಲ್ಲಿರುವುದು.**

ಇಲಾಖೆಯು ಶಿಥಿಲಾವಸ್ಥೆಯಲ್ಲಿರುವಂತಹ ಸ್ಮಾರಕಗಳ ಸಂರಕ್ಷಣಾ ಕಾರ್ಯಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ವಾಸ್ತವಿಕವಾಗಿ ಅಗತ್ಯವಿರುವಂತಹ ಹಣಕಾಸನ್ನು ವಿಶ್ಲೇಷಣೆ ಮಾಡುವಲ್ಲಿ ವಿಫಲಗೊಂಡಿದ್ದಿತು. ಹಾಗೂ ಅಲ್ಲದೆಯೇ ನಿರ್ವಹಣೆಗಾಗಿ ಅಗತ್ಯತೆ ಇದ್ದಂತಹ ವಾಸ್ತವಿಕ ಹಣಕಾಸಿನ ಅಂದಾಜು ಮಾಡುವ ಸಲುವಾಗಿ ಯಾವುದೇ ಸಂಶೋಧನೆಯನ್ನು ಮಾಡಿರಲಿಲ್ಲ.

**ಶಿಫಾರಸ್ಸು 13:**

**ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳು ಅಧಿನಿಯಮದ ಅನುವುಗಳನ್ನು ಚಾಚೂ ತಪ್ಪದೆ ಪಾಲಿಸಬೇಕು.**

## ಸಾರ್ವಜನಿಕ ತೊಡಗಿಸಿಕೊಳ್ಳುವಿಕೆ ಮತ್ತು ಸ್ಮಾರಕಗಳಿಗೆ ಪ್ರವೇಶಸಾಧ್ಯತೆ

**4.6** ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ *ಕಲಮು 1.06* ಪ್ರಾಚೀನ /ಐತಿಹಾಸಿಕ ಸ್ಮಾರಕಗಳನ್ನು ಮೌಲ್ಯಮಾಪನ ಮಾಡತಕ್ಕದ್ದು ಹಾಗೂ ಹಿಂದಿನ ಸಂಸ್ಕೃತಿಗಳ ಉದಾಹರಣೆಗಳ ಅಂಶಗಳು ಹಾಗೂ ಉದಾಹರಣೀಯ ಮಾನವ ಸೃಷ್ಟಿಯನ್ನು ಪ್ರತಿನಿಧಿಸುವ, ಕೌಶಲ್ಯ ಸಂಪ್ರದಾಯವನ್ನು ಸೃಷ್ಟಿಸುವಂತಹ, ತಾಂತ್ರಿಕೆ ಹಾಗೂ ವಾಸ್ತುಶಿಲ್ಪದ ಮತ್ತು /ಅಥವಾ ಕಲಾ ಮತ್ತು/ಅಥವಾ ತಾಂತ್ರಿಕ ನೆರವೇರಿಕೆ ಅಥವಾ ಈಡೇರಿಕೆ ಹಾಗೂ ಈ ಸ್ಮಾರಕಗಳು ಐತಿಹಾಸಿಕ ಮತ್ತು ಸಾಂಸ್ಕೃತಿಕ ಘಟನೆಗಳ ಒಂದು ಸ್ಪರ್ಶಿಸಬಹುದಾದಂತಾಹ ಅಥವಾ ಗೋಚರಿಸುವಂತಹ ಕುರುಹು ಅಥವಾ ಪುರಾವೆ ಹಾಗೂ ನಮ್ಮ ಹಿಂದಿನ ಅಭಿವೃದ್ಧಿಗಳು ಅನೇಕ ಶತಮಾನಗಳ ಕಾಲ ವ್ಯಾಪಿಸತಕ್ಕದ್ದು ಎಂಬುದಾಗಿ ಚಿಂತಿಸಿರುತ್ತದೆ.

ಮುಂದುವರೆದು ಕಾರ್ಯನೀತಿಯು ಭೇಟಿ ನೀಡುವ ಪ್ರವಾಸಿಗರ ಅನುಕೂಲತೆಗಾಗಿ ಸ್ಮಾರಕಗಳ ಒಳಗೇ ಅಥವಾ ಸಮೀಪದಲ್ಲಿ ಸೂಕ್ತವಾದಂತಹ ಅನುಕೂಲತೆಗಳು / ಮೂಲಸೌಕರ್ಯಗಳನ್ನು ಒದಗಿಸುವುದನ್ನು ಕೂಡ ಚಿಂತಿಸಿರುತ್ತದೆ. ಸಮರ್ಪಕ ರಸ್ತೆಗಳು ಹಾಗೂ ಸಾರ್ವಜನಿಕ ಅನುಕೂಲತೆಗಳು (ಶೌಚಾಲಯಗಳು, ಕುಡಿಯುವ ನೀರು ಇತ್ಯಾದಿ) ಮಾಹಿತಿ ಫಲಕಗಳು/ ಸಾಂಸ್ಕೃತಿಕ ಮಾಹಿತಿ ಫಲಕಗಳು ಹಾಗೂ ವಿವಿಧ ಮಾಡಬಹುದಾದವುಗಳು ಮತ್ತು ಮಾಡಬಾರದವುಗಳ ಪಟ್ಟಿ ಮುಂತಾದ ಅನುಕೂಲತೆಗಳು ಅಗತ್ಯವಾಗಿರುತ್ತವೆ.


ಲೆಕ್ಕಪರಿಶೋಧನೆಯು ಇಲಾಖೆಯ ಅಧಿಕಾರಿಗಳೊಂದಿಗೆ ನಡೆಸಿದ ಜಂಟಿ ಭೌತಿಕ ಪರೀಕ್ಷಣೆಯು ಈ ಕೆಳಗಿನ ಅಸಮರ್ಪಕತೆಗಳನ್ನು ತೋರಿಸಿಕೊಟ್ಟಿತು.

### ಸಂರಕ್ಷಿತ ಸ್ಮಾರಕಗಳಿಗೆ ಅಸಮರ್ಪಕ ಪ್ರವೇಶ ಮಾರ್ಗಗಳು

**9 ಸ್ಥಳಗಳು**

**ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ತೋರಿಸುವ ವಿಡಿಯೋವನ್ನು ವೀಕ್ಷಿಸಲು ಮೇಲಿನ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ**

**4.6.1** ಸ್ಮಾರಕಗಳಲ್ಲಿ ಹಾಗೂ ಅವುಗಳ ಸುತ್ತಮುತ್ತಲು ಮೂಲಸೌಕರ್ಯ ಅಭಿವೃದ್ಧಿಯು (ಸಂಪರ್ಕ ಮಾರ್ಗಗಳು ಒಳಗೊಂಡಂತೆ) ಸಮುದಾಯಗಳಿಗೆ ಊರ್ಜಿತಗೊಳ್ಳಬಲ್ಲಂತಹ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳಿಗಾಗಿ ಅವಕಾಶಗಳನ್ನು ಒದಗಿಸುತ್ತದೆ. ಮುಂದುವರೆದು ಸಂರಕ್ಷಣಾ / ಕಾಪಾಡಿಕೊಂಡು ಹೋಗುವಿಕೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಹಾಗೂ ಅಲ್ಲದೆಯೇ ಪ್ರವಾಸಿಗರುಗಳನ್ನು ಆಕರ್ಷಿಸುವ ಸಲುವಾಗಿ ಸಂಪರ್ಕ ಮಾರ್ಗಗಳು ಅತ್ಯಗತ್ಯವಾಗಿರುತ್ತದೆ. ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಂಡಿದ್ದಂತಹ 71 ಮಾದರಿ ಸ್ಥಳಗಳ ಪೈಕಿ 9 ಸ್ಥಳಗಳು (ಶೇಕಡ 13) ಈ ಕೆಳಗೆ ತೋರಿಸಿರುವಂತೆ ಸಂರಕ್ಷಿತ ಸ್ಮಾರಕಗಳನ್ನು ತಲುಪಲು ಸಮರ್ಪಕವಾದಂತಹ ಸಂಪರ್ಕ ಮಾರ್ಗಗಳನ್ನು ಹೊಂದಿರಲಿಲ್ಲ.





**ಛಾಯಾಚಿತ್ರ ಸಂಖ್ಯೆ 4.30: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಶ್ರೀ ಚನ್ನಕೇಶವ ದೇವಸ್ಥಾನಕ್ಕೆ ಯಾವುದೇ ಸಂಪರ್ಕ ರಸ್ತೆ ಇಲ್ಲದಿರುವುದು.**




**ಛಾಯಾಚಿತ್ರ ಸಂಖ್ಯೆ 4.31: ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಣ್ಣಾಡಿಯಲ್ಲಿ ಶ್ರೀ ಹರಿದೇವ ಮತ್ತು ಮಲ್ಲಿಕಾರ್ಜುನ ದೇವಸ್ಥಾನಕ್ಕೆ ನಿಕೃಷ್ಟಮಟ್ಟದ ರಸ್ತೆ.**




**ಛಾಯಾಚಿತ್ರ ಸಂಖ್ಯೆ 4.32: ರಾಯಚೂರು ಜಿಲ್ಲೆಯ ಚಿಕ್ಕಲಪರ್ವಿಯಲ್ಲಿ ಹಿಂದೂ ದೇವಸ್ಥಾನ ಮತ್ತು ಶಿಲಾಶಾಸನಕ್ಕೆ ಸಂಪರ್ಕ ರಸ್ತೆಯ ಕೊರತೆ.**




**ಛಾಯಾಚಿತ್ರ ಸಂಖ್ಯೆ 4.33: ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಹಿರೇಮಣಕಟ್ಟಿಯಲ್ಲಿ ಶ್ರೀ ಸೋಲಬೇಶ್ವರ ದೇವಸ್ಥಾನಕ್ಕೆ ಸಂಪರ್ಕ ರಸ್ತೆಯ ಕೊರತೆ.**

ಎಲ್ಲೆಲ್ಲಿ ಅಗತ್ಯವಿದೆಯೋ ಅಂತಹ ಕಡೆಗಳಲ್ಲಿ ರಸ್ತೆಗಳು, ಸಾರ್ವಜನಿಕ ಅನುಕೂಲತೆಗಳನ್ನು ಸಂಬಂಧಿತ ಜಿಲ್ಲಾ ಆಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಯು ಒದಗಿಸುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್–2023). ಆದಾಗ್ಯೂ, ಜಿಲ್ಲಾಡಳಿತ/ಪ್ರವಾಸೋದ್ಯಮ ಇಲಾಖೆಯೊಂದಿಗೆ ಅನುಸರಿಸಲು ಮತ್ತು ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಪ್ರಾಥಮಿಕ ಜವಾಬ್ದಾರಿಯನ್ನು ಹೊಂದಿದೆ.

**ಮಾರ್ಗಸೂಚಿ ಫಲಕಗಳು / ಸಾಂಸ್ಕೃತಿಕ ಫಲಕಗಳ ಅನುಪಸ್ಥಿತಿ**

**4.6.2** ಒಂದು ಮಾರ್ಗಸೂಚಿ ಫಲಕವು ಭೇಟಿ ನೀಡುವ ಪ್ರವಾಸಿಗರುಗಳಿಗೆ ಸ್ಮಾರಕದ ಬಗ್ಗೆ ಪ್ರಮುಖ ಮಾಹಿತಿಯನ್ನು ಒದಗಿಸುವುದು. ಭೇಟಿ ನೀಡಿಲಾದ 71 ಸ್ಮಾರಕಗಳ ಪೈಕಿ ಸ್ಮಾರಕಗಳ ಬಗ್ಗೆ ಮಾಹಿತಿಯನ್ನು ಪ್ರದರ್ಶಿಸುವ ಮಾರ್ಗಸೂಚಿ ಫಲಕಗಳನ್ನು ಇಲಾಖೆಯು ಹಾಕಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 6 ಸ್ಥಳಗಳಲ್ಲಿ ಸ್ಥಳೀಯ ಸಮುದಾಯಗಳು ಮಾರ್ಗಸೂಚಿ ಫಲಕಗಳನ್ನು ಹಾಕಿದ್ದವು (ವಿವರಗಳು ***ಅನುಬಂಧ 10ರಲ್ಲಿ***). ರಾಜ್ಯ ಪ್ರವಾಸೋದ್ಯಮ ಇಲಾಖೆಯು ಮಾರ್ಗಸೂಚಿ ಫಲಕಗಳನ್ನು ಭಾರತೀಯ ಪುರಾತತ್ವ ಸಂಶೋಧನ ಸಂಸ್ಥೆಯ ನಿಯಂತ್ರಿತ ಸ್ಮಾರಕಗಳಲ್ಲಿ ಸಂಪರ್ಕ ರಸ್ತೆಗಳಲ್ಲಿ ಹಾಗೂ ಅಲ್ಲದೆಯೇ ನಿವೇಶನಗಳಲ್ಲಿ ಹಾಕಿದ್ದಿತು ಎಂಬುದು ಪ್ರಾಸಂಗಿಕವಾಗಿ ಕಂಡುಬಂದಿತು.




**ಛಾಯಾಚಿತ್ರ ಸಂಖ್ಯೆ 4.34: ಹಾವೇರಿ ಜಿಲ್ಲೆಯ ಹಾಗೂ ತಾಲ್ಲೂಕಿನ ಹರಳಹಳ್ಳಿಯಲ್ಲಿ ಭಾರತೀಯ ಪುರಾತತ್ವ ಸಂಶೋಧನ ಸಂಸ್ಥೆಯ ನಿಯಂತ್ರಿತ ಸ್ಮಾರಕದಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಪ್ರದರ್ಶಿಸಿರುವ ಮಾರ್ಗಸೂಚಿ ಫಲಕ.**




**ಛಾಯಾಚಿತ್ರ ಸಂಖ್ಯೆ 4.35: ಸ್ಮಾರಕದ ಸಮೀಪ ಭಾರತೀಯ ಪುರಾತತ್ವ ಸಂಶೋಧನ ಸಂಸ್ಥೆಯ ನಿಯಂತ್ರಿತ ಸ್ಮಾರಕದ ಬಗ್ಗೆ ಮಾಹಿತಿಯನ್ನು ತೋರಿಸಿದಂತೆ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಹಾಕಿರುವಂತಹ ಮಾರ್ಗಸೂಚಿ ಫಲಕ.**

ಸಂರಕ್ಷಿತ ಸ್ಮಾರಕಗಳ ಪ್ರಾಮುಖ್ಯತೆ ಮತ್ತು ಇತಿಹಾಸವನ್ನು ವಿವರಿಸುವ ದ್ವಿಭಾಷೆಯ ಸಾಂಸ್ಕೃತಿಕ ಫಲಕಗಳನ್ನು ಕೂಡ 63 ಸ್ಥಳಗಳಲ್ಲಿ ಪ್ರದರ್ಶಿಸಿರಲಿಲ್ಲ. ಎರಡು ಸ್ಥಳಗಳಲ್ಲಿ[33] ಪ್ರದರ್ಶಿಸಲಾಗಿದ್ದಂತಹ ಸಾಂಸ್ಕೃತಿಕ ಫಲಕಗಳನ್ನು ಇಲಾಖೆಯು ಒದಗಿಸಿರಲಿಲ್ಲ.

ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಮಾಹಿತಿ ಮತ್ತು ಸಂರಕ್ಷಣಾ ಫಲಕಗಳನ್ನು ಹಾಕಲಾಗಿರುವುದು ಹಾಗೂ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ 2023–24 ಮತ್ತು 2024–25 ರಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.




**ಛಾಯಾಚಿತ್ರ ಸಂಖ್ಯೆ 4.36: ಸ್ಮಾರಕದ ಇತಿಹಾಸವನ್ನು ವಿವರಿಸುವಂತಹ ದ್ವಿಭಾಷಾ ಸಾಂಸ್ಕೃತಿಕ ಫಲಕ.**

**ಸಾರ್ವಜನಿಕ ಸೌಕರ್ಯಗಳು ಮತ್ತು ಪ್ರತಿಕ್ರಿಯೆ ಕಾರ್ಯವಿಧಾನದ ಅನುಪಸ್ಥಿತಿ**

**4.6.3** ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿ, 2014ರ ಕಂಡಿಕೆ 9.04ರ ಅನುಸಾರ ಭೇಟಿ ನೀಡುವವರು ಅನುಕೂಲತೆಗಳನ್ನು ಅನುಭವಿಸುವ ರೀತಿಯಲ್ಲಿ ಪ್ರತಿಯೊಂದು ಸಂರಕ್ಷಿತ ನಿವೇಶನಗಳು / ಸ್ಮಾರಕ ನಿವೇಶನದಲ್ಲಿ ಅಗತ್ಯ ಸಾರ್ವಜನಿಕ ಅನುಕೂಲತೆಗಳನ್ನು (ಶೌಚಾಲಯಗಳು, ಕುಡಿಯುವ ನೀರು ಇತ್ಯಾದಿ) ಒದಗಿಸತಕ್ಕದ್ದು.

ಲೆಕ್ಕಪರಿಶೋಧನೆಯಲ್ಲಿ ಆಯ್ದುಕೊಳ್ಳಲಾಗಿದ್ದಂತಹ ಮಾದರಿ ಸ್ಥಳಗಳ ಜಂಟಿ ಪರೀಕ್ಷಣೆಯು 53 ಸ್ಥಳಗಳಲ್ಲಿ (ಶೇಕಡ 75) ಸಾರ್ವಜನಿಕ ಅನುಕೂಲತೆಗಳು ಇರಲಿಲ್ಲ (***ಅನುಬಂಧ–11***) ಹಾಗೂ

[33] ಕಲಬುರಗಿಯ ಅ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಅಫ್ಜಲ್ ಖಾನ್ ಸಮಾಧಿ ಮತ್ತು ಮಸೀದಿ ಮತ್ತು ಬೆಂಗಳೂರು ನಗರದಲ್ಲಿ ಶ್ರೀ ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನ.

ಲಭ್ಯವಿದ್ದಂತಹ ಕಡೆಗಳಲ್ಲಿ ಅವುಗಳನ್ನು ಸ್ಥಳೀಯ ಸಮುದಾಯಗಳು/ ಪ್ರಾಧಿಕಾರಗಳು/ ರಾಜ್ಯ ಪ್ರವಾಸೋದ್ಯಮ ಇಲಾಖೆ ಒದಗಿಸಿದ್ದವು.



**ಛಾಯಾಚಿತ್ರ ಸಂಖ್ಯೆ 4.37: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಜಲದುರ್ಗ ಕೋಟೆಯಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಒದಗಿಸಿರುವಂತಹ ಸಾರ್ವಜನಿಕ ಅನುಕೂಲತೆಗಳು.**

ಭೇಟಿ ನೀಡುವ ಸಾರ್ವಜನಿಕರ ಸಂಖ್ಯೆಯಲ್ಲಿನ ಹೆಚ್ಚಳವು ಸ್ವಯಂಚಾಲಿತವಾಗಿ ಯಾವುದೇ ಸ್ಮಾರಕದ ಐತಿಹಾಸಿಕ ಮೌಲ್ಯವನ್ನು ಎತ್ತಿತೋರಿಸುವುದು ಹಾಗೂ ಅದರಿಂದಾಗಿ ಸಾರ್ವಜನಿಕರು ಸುರಕ್ಷತೆ ಮತ್ತು ಸಂರಕ್ಷಣೆ ಕಾರ್ಯಚಟುವಟಿಕೆಗಳಲ್ಲಿ ಪ್ರಮುಖ ಸಹಭಾಗಿಗಳಾಗಿರುತ್ತಾರೆ. ಭೇಟಿ ನೀಡುವವರು / ಪ್ರವಾಸಿಗರುಗಳಿಂದ ಅಭಿಪ್ರಾಯ ಸಂಗ್ರಹಣೆಗಾಗಿ 71 ಸ್ಥಳಗಳಲ್ಲಿ ಯಾವುದೇ ಒಂದರಲ್ಲಿಯೂ ಸಲಹೆಗಳು / ದೂರುಗಳ ರಿಜಿಸ್ಟರ್‌ಗಾಗಿ ಅನುವು ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯು ಲಭ್ಯವಿರುವ ಕಡೆಗಳಲ್ಲಿ ಸಲಹಾ ಪುಸ್ತಕಗಳನ್ನು ನಿರ್ವಹಿಸಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ಸಾರ್ವಜನಿಕ ಅನುಕೂಲತೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಹಾಗೂ ನಿಗಾವಣೆ ಮತ್ತು ರಕ್ಷಣಾ ಸಿಬ್ಬಂದಿಯು ಇಲ್ಲದಿರುವ ಕಡೆಗಳಲ್ಲಿ ಪ್ರಸ್ತಾಪಿಸಲಾಗಿರುವ ಕ್ರಮಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

**ಶಿಫಾರಸ್ಸುಗಳು**

**14: ಸರ್ಕಾರವು ಎಲ್ಲಾ ಪುರಾತತ್ವ ನಿವೇಶನಗಳಿಗೆ ಸಮರ್ಪಕ ಪ್ರವೇಶ ಮಾರ್ಗಗಳನ್ನು, ಸಮರ್ಪಕ ಮಾಹಿತಿಯನ್ನು ಒದಗಿಸುವ ಮೂಲಕ ದ್ವಿಭಾಷೀಯ ಮಾರ್ಗಸೂಚಿ ಫಲಕಗಳನ್ನು ಹಾಕುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಅಲ್ಲದೆಯೇ ಮೂಲ ಅನುಕೂಲತೆಗಳು ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಬೇಕು.**


**15. ಭೇಟಿ ನೀಡುವವರುಗಳಿಂದ ಬರುವಂತಹ ಸಲಹೆಗಳು/ ದೂರುಗಳನ್ನು ಬಗೆಹರಿಸುವ ಸಲುವಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಸಲಹಾ ವ್ಯವಸ್ಥೆಯನ್ನು ರೂಪಿಸಬೇಕು.**

### ಅಧಿಕೃತ ಜಾಲತಾಣದ (ವೆಬ್‌ಸೈಟ್) ಅಸಮರ್ಪಕ ನಿರ್ವಹಣೆ

**4.6.4** ರಾಜ್ಯಸರ್ಕಾರದ ನಿರ್ದೇಶನಗಳಿಗೆ (ಮಾರ್ಚ್ 2019) ಅನುಸರಣಾ ಕ್ರಮಗಳಾಗಿ ಇಲಾಖೆಯು ತನ್ನ ಅಧಿಕೃತ ಜಾಲತಾಣವನ್ನು (archaeology.karnataka.gov.in) ಅಭಿವೃದ್ಧಿಪಡಿಸಿರುವುದು ಹಾಗೂ ಅದನ್ನು ಪ್ರಾರಂಭಿಸಿರುವುದು (ಜನವರಿ 2021).

ಜಾಲತಾಣವನ್ನು ನಿಯತಕಾಲಿಕವಾಗಿ ಇಂದಿನದಿನದನ್ನಾಗಿ ಮಾಡಿರಲಿಲ್ಲ ಹಾಗೂ ಲೆಕ್ಕಪರಿಶೋಧನೆಯು ಈ ನಿಟ್ಟಿನಲ್ಲಿ ಗಮನಿಸಲಾದಂತಹ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿರುವುದು.

- 848 ರಾಜ್ಯ ಸಂರಕ್ಷಿತ ಸ್ಮಾರಕಗಳಿದ್ದವು, ಆದರೆ ಜಾಲತಾಣದಲ್ಲಿ ಕೇವಲ 844 ಸ್ಮಾರಕಗಳ ವಿವರಗಳನ್ನು ತೋರಿಸಲಾಗಿದ್ದಿತು. ಪಟ್ಟಿಯು 2021–22ರಲ್ಲಿ ಅಧಿಸೂಚನೆ ನೀಡಲಾದ ಚಾಮರಾಜನಗರ ಜಿಲ್ಲೆಯ 4 ಸ್ಮಾರಕಗಳನ್ನು ಒಳಗೊಂಡಿರಲಿಲ್ಲ.


vities Heritage - Conservation & Preservation Ancient Monuments Government Museums - RTI -

rock-cut sculptures, Stupas, Monasteries, Gardens etc.,

onuments and Archaeological Sites in Karnataka

| S. No | Division | State Monument / Sites | | ASI Monument / Sites | | Total Protected Monuments / Sites | |
|---|---|---|---|---|---|---|---|
| | | S. No | Total % | S. No | Total % | S. No | Total % |
| 1 | Bangalore | 105 | 12.44 | 63 | 10.34 | 168 | 11.56 |
| 2 | Belgaum | 365 | 43.25 | 311 | 51.07 | 676 | 46.52 |
| 3 | Kalgurugi | 249 | 29.50 | 164 | 26.93 | 413 | 28.42 |
| 4 | Mysore | 125 | 14.81 | 71 | 11.66 | 196 | 13.51 |
| Total | | 844 | 100.00 | 609 | 100.00 | 1453 | 100.00 |

he second highest number of protected monuments in the country

**ಛಾಯಾಚಿತ್ರ ಸಂಖ್ಯೆ 4.38: ತಪ್ಪು ಮಾಹಿತಿಯನ್ನು ತೋರಿಸುತ್ತಿರುವ ಪುರಾತತ್ವ ಇಲಾಖೆಯ ಜಾಲತಾಣ (05.06.2023 ರಂದು ಸ್ಕ್ರೀನ್ ಶಾಟ್ ತೆಗೆದುಕೊಂಡಿರುವುದು).**

- ಇಲಾಖೆಯು ಸಂರಕ್ಷಣೆ ಯೋಜನೆಯಡಿಯಲ್ಲಿ 19 ತಾಲ್ಲೂಕುಗಳಲ್ಲಿ ಗ್ರಾಮವಾರು ಸಮೀಕ್ಷೆಯನ್ನು ನಡೆಸಿ 9552 ಸ್ಮಾರಕಗಳನ್ನು (ಕಂಡಿಕೆ ಸಂಖ್ಯೆ 3.2ರಲ್ಲಿ ವಿವರಿಸಿರುವಂತೆ) ಗುರುತಿಸಿದ್ದರೂ ಅವುಗಳನ್ನು ಜಾಲತಾಣದಲ್ಲಿ ತೋರಿಸಿರಲಿಲ್ಲ.

- ಎಲ್ಲಾ ಸಂರಕ್ಷಿತ ಸ್ಮಾರಕಗಳ ಛಾಯಾಚಿತ್ರಗಳು ಮತ್ತು ಐತಿಹಾಸಿಕ ವಿವರಗಳು ಲಭ್ಯವಿರಲಿಲ್ಲ.

- ಇಲಾಖೆಯು ಕೈಗೊಂಡಿರುವಂತಹ ಉತ್ಖನನದ ಬಗ್ಗೆಗಿನ ಯಾವುದೇ ವಿವರಗಳು / ವರದಿಗಳು ಲಭ್ಯವಿರಲಿಲ್ಲ.

- ಸ್ಮಾರಕಗಳ ಜಿಪಿಎಸ್ ಗುರುತಿಸುವಿಕೆಯು ಕೂಡ ಲಭ್ಯವಿರಲಿಲ್ಲ (ಈ ಕಾರಣದಿಂದಾಗಿ ಲೆಕ್ಕಪರಿಶೋಧನೆಯು ಕಂಡಿಕೆ 3.4ರಲ್ಲಿ ವಿವರಿಸಿರುವಂತೆ ಅಧಿಸೂಚಿತ ಸ್ಮಾರಕಗಳ 13 ಸ್ಥಳಗಳನ್ನು ಕಂಡುಕೊಳ್ಳಲಾಗಲಿಲ್ಲ.

ಇಂದಿನದಿನದನ್ವಾಗಿ ಮಾಡಲಾದಂತಹ ಸಂರಕ್ಷಿತ ಸ್ಮಾರಕಗಳ ಪಟ್ಟಿಯನ್ನು ಎಲ್ಲಾ ಡಿಜಿಟಲ್ ಛಾಯಾಚಿತ್ರಗಳು ಮತ್ತು ಐತಿಹಾಸಿಕ ವಿವರಗಳೊಂದಿಗೆ ಡಿಜಿಟಲ್ ದಾಖಲೀಕರಣ ಪ್ರಕ್ರಿಯೆಯು ಪೂರ್ಣಗೊಂಡನಂತರ ಪ್ರಕಟಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಆಗಸ್ಟ್–2023).

**ಶಿಫಾರಸ್ಸು: 16**

**ಇಲಾಖೆಯ ವೆಬ್‌ಸೈಟ್‌ನ ನಿಖರವಾದ ನವೀಕರಣವನ್ನು ಖಚಿತಪಡಿಸಿಕೊಳ್ಳಲು ಕ್ರಮ ತೇಗೆದುಕೊಳ್ಳುವುದು.**

**ಪುಸ್ತಕಗಳ ಪ್ರಕಟಣೆ, ದಾಸ್ತಾನಿನಲ್ಲಿ ಹೊಂದಿರುವಿಕೆ ಮತ್ತು ಮಾರಾಟ**

**4.6.5** ಇಲಾಖೆಯು ಆಯುಕ್ತರ ನೇತೃತ್ವದಲ್ಲಿರುವಂತಹ ಒಂದು ಸಮಿತಿಯ ಶಿಫಾರಸ್ಸಿನ ಆಧಾರದ ಮೇರೆಗೆ ಪುರಾತತ್ವಶಾಸ್ತ್ರದ ಮೇಲೆ ಆಯ್ದ ಕೃತಿಗಳನ್ನು (ಪಾರಂಪರಿಕ ಪಟ್ಟಣಗಳ ಮೇಲಿನ

ಪ್ರಕಟಣೆಗಳು, ಪಾರಂಪರಿಕ ಸಂರಕ್ಷಣೆಗಳ ಮೇಲಿನ ಕೈಪಿಡಿಗಳು) ಪ್ರಕಟಿಸುವುದು. ಕರ್ನಾಟಕ ಸರ್ಕಾರವು ಕನ್ನಡದ ಕೃತಿಗಳನ್ನು ಪ್ರಸಿದ್ಧಿಗೆ ತರುವ ದೃಷ್ಟಿಯಿಂದ ಸರ್ಕಾರಿ ಪ್ರಕಟಣೆಗಳನ್ನು ರಿಯಾಯಿತಿ ದರಗಳಲ್ಲಿ[34] ಮಾರಾಟ ಮಾಡುವುದಕ್ಕೆ ತನ್ನ ಅನುಮೋದನೆಯನ್ನು ನೀಡಿತು (ಅಕ್ಟೋಬರ್–2009). 2017–22ರ ಅವಧಿಯಲ್ಲಿ ಇಲಾಖೆಯು ಈ ಕೆಳಗೆ ನೀಡಿರುವಂತಹ ವಿವರಣೆಗಳಂತೆ ವಿವಿಧ ಜಿಲ್ಲೆಗಳ ಐತಿಹಾಸಿಕ ಮತ್ತು ಪಾರಂಪರಿಕತೆಯ ಮೇಲೆ 16 ಶೈಕ್ಷಣಿಕ ಮತ್ತು ಸಂಶೋಧನಾ ಪುಸ್ತಕಗಳನ್ನು ಮುದ್ರಿಸುವುದನ್ನು ಕೈಗೆತ್ತಿಕೊಂಡಿತು.

**ಕೋಷ್ಟಕ ಸಂಖ್ಯೆ. 4.2: 2017–18ರಿಂದ 2021–22ರ ಅವಧಿಯಲ್ಲಿ ಪ್ರಕಟಿಸಲಾದ ಪುಸ್ತಕಗಳು ಹಾಗೂ ಅವುಗಳ ಮೇಲೆ ಭರಿಸಲಾದ ವೆಚ್ಚಗಳ ವಿವರಗಳನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ಪುಸ್ತಕದ ಹೆಸರು | ಪ್ರತಿಗಳ ಸಂಖ್ಯೆ | ಮೊತ್ತ (ಲಕ್ಷ ರೂಪಾಯಿಗಳಲ್ಲಿ) |
|---|---|---|---|
| **1** | **2017–18** | | |
| | ಚಾಮರಾಜನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ | 500 | 03.55 |
| | ವಿಜಯನಗರದ ಮೇಲಿನ ಅಧ್ಯಯನ ಸಂಪುಟ–20 | 500 | 2.18 |
| | ಕರ್ನಾಟಕದಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಕಲಾಕೃತಿಗಳು | 500 | 2.45 |
| **2** | **2018–19** | | |
| | ಕರ್ನಾಟಕದಲ್ಲಿ ಭೌದ್ದರ ಕಲೆ ಮತ್ತು ಸಂಸ್ಕೃತಿ | 500 | 3.71 |
| | ತಲಕಾಡಿನಲ್ಲಿ ಪುರಾತತ್ವ ಸಂಶೋಧನೆಗಳು 2006–2010 ಸಂಪುಟ–02 | 500 | 2.38 |
| **3** | **2019–20** | | |
| | ವಿಜಯನಗರದ ಮೇಲಿನ ಅಧ್ಯಯನ ಸಂಪುಟ–21 | 500 | 0.95 |
| | ಹಂಪಿ– ಅಂದಿನ ಗತವೈಭವ | 2000 | 9.60 |
| | ವಿಜಯನಗರದ ಮೇಲಿನ ಅಧ್ಯಯನ ಸಂಪುಟ–22 | 500 | 1.00 |
| | ಕರ್ನಾಟಕ ವಾಸ್ತುಶಿಲ್ಪದ ಒಂದು ಸುಂದರ ತೋಟ | 2000 | 9.00 |
| | ಮೈಸೂರು ದಸರಾ–ರಾಜ್ಯದ ಹಬ್ಬ | 2000 | 6.40 |
| **4** | **2020–21** | | |
| | ಹಂಪಿ– ಗತವೈಭವ ನಗರಿ | 2000 | 11.54 |
| | ವಿಜಯಪುರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವತೆ | 500 | 4.95 |
| | ಹಾವೇರಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವತೆ | 500 | 4.98 |
| | ಕಿತ್ತೂರು ಸಂಸ್ಥಾನದ ಇತಿಹಾಸ ಮತ್ತು ಸಂಸ್ಕೃತಿ | 500 | 3.53 |
| **5** | **2021–22** | | |
| | ಉತ್ತರಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವತೆ | 500 | 4.93 |
| | ಕೊಡಗು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವತೆ | 500 | 4.80 |
| | | **14,000** | **75.95** |

**ಮೂಲ: ಇಲಾಖೆಯು ಒದಗಿಸಿದ ಮಾಹಿತಿಯಂತೆ)**


ಲೆಕ್ಕಪರಿಶೋಧನೆಯು ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟದಲ್ಲಿ ಈ ಕೆಳಗೆ ವಿವರಿಸಿರುವಂತೆ ಅಸಮರ್ಪಕತೆಗಳನ್ನು ಗಮನಿಸಿತು.

- ಪ್ರಕಟಣೆಗಳು ಕೈಗೆಟುಕುವ ದರಗಳಲ್ಲಿ ಖರೀದಿಸುವುದನ್ನು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ಸರ್ಕಾರವು ದರಗಳ ನಿಗದಿಗಾಗಿ ಒಂದು ಕಾರ್ಯನೀತಿಯನ್ನು ರೂಪಿಸುವುದಾಗಿ ಆಶ್ವಾಸನೆ ನೀಡಿದ್ದಿತು (ಡಿಸೆಂಬರ್–2011). ಆದಾಗ್ಯೂ, ಪ್ರಕಟಣೆಗಳ ಆಯ್ಕೆ, ಮುದ್ರಣ, ಮುದ್ರಿಸಬೇಕಾದ ಪ್ರತಿಗಳ ಸಂಖ್ಯೆ ಹಾಗೂ ಮಾರಾಟ ದರಗಳ[35] ನಿಗದಿಗಾಗಿ ಅಂತಹ ಯಾವುದೇ ಕಾರ್ಯನೀತಿಯನ್ನು ರೂಪಿಸಿರಲಿಲ್ಲ.

[34] ಹೊಸ ಪ್ರಕಟಣೆಗಳು ಎರಡು ವರ್ಷಗಳವರೆವಿಗೂ *ಶೇಕಡಾ 15ರಂತೆ* (ಮಾರಾಟಗಾರರುಗಳಿಗೆ *ಶೇಕಡಾ 20*), ಉಳಿದ ಹಳೆಯ ಪ್ರಕಟಣೆಗಳು ಪುಸ್ತಕಗಳು ಪ್ರಕಟಗೊಂಡು ಕಳೆದಿರುವಂತಹ ಅವಧಿಯ ಆಧಾರದ ಮೇರೆಗೆ *ಶೇಕಡಾ 20*ರಿಂದ *ಶೇಕಡಾ 50*ರವರೆವಿಗೂ (ಮಾರಾಟಗಾರರುಗಳಿಗೆ *ಶೇಕಡಾ 25*ರಿಂದ *ಶೇಕಡಾ 55*).

[35] ಪ್ರಕಟಣೆಗಳ ಮಾರಾಟ ದರವು ಮುದ್ರಣದ ಮೇಲೆ ಭರಿಸಲಾಗಿದ್ದಂತಹ ಪ್ರಮಾಣಾನುಗುಣವಾದಂತಹ ವೆಚ್ಚದ ಆಧಾರದ ಮೇರೆಗೆ ₹ 250/–ರಿಂದ ₹ 999/–ರವರೆವಿಗೂ ಆಗಿದ್ದಿತು.

- ಇಲಾಖೆಯು ಮಾರ್ಚ್–2020 ಮತ್ತು ಮಾರ್ಚ್–2021ರ ನಡುವೆ ಮಾರಾಟಕ್ಕಾಗಿ[36] ಮುದ್ರಿಸಿದ ಆರು ಶೈಕ್ಷಣಿಕ ಮತ್ತು ಸಂಶೋಧನಾ ಪುಸ್ತಕಗಳನ್ನು ಬಿಡುಗಡೆಗೊಳಿಸಿರಲಿಲ್ಲ ಹಾಗೂ ಅವುಗಳನ್ನು ತನ್ನ ದಾಸ್ತಾನಿನಲ್ಲಿ ಇಟ್ಟುಕೊಂಡಿದ್ದಿತು (ಮಾರ್ಚ್–2022). ಪ್ರಾಸಂಗಿಕವಾಗಿ, ಆಯುಕ್ತರು 2022 ಸಾಲಿಗೆ ಅನುಮೋದಿಸಿದ್ದಂತಹ ದರಪಟ್ಟಿಯಲ್ಲಿ ಈ ಪ್ರಕಟಣೆಗಳು ಒಳಗೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಈ ಪುಸ್ತಕಗಳನ್ನು ಬಿಡುಗಡೆಗೊಳಿಸದಿರಲು ಕಾರಣಗಳು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಿದಂತಹ ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.




**ಛಾಯಾಚಿತ್ರ ಸಂಖ್ಯೆ 4.39: ಇಲಾಖೆಯು ಬಿಡುಗಡೆಗೊಳಿಸದ್ದಿದ್ದಂತಹ ಮತ್ತು ದರಪಟ್ಟಿಯಲ್ಲಿ ಒಳಗೊಂದಿರದ್ದಿದ್ದಂತಹ ಶೈಕ್ಷಣಿಕ ಪುಸ್ತಕಗಳು**

- 156 ವಿವಿಧ ಪ್ರಕಟಣೆಗಳ 66,439 ಪ್ರತಿಗಳು, ಅವುಗಳಲ್ಲಿ ಹತ್ತು ವರ್ಷಗಳಿಗಿಂತ ಹಳೆಯದಾದ 49,591 ಪ್ರತಿಗಳು (1971ರಿಂದ 2012ರ ನಡುವೆ ಪ್ರಕಟಿಸಲಾಗಿದ್ದವು) ಇವುಗಳನ್ನು ದಾಸ್ತಾನಿನಲ್ಲಿ ಇಡಲಾಗಿದ್ದಿತು. (ಮಾರ್ಚ್–2022).

ದಾಸ್ತಾನಿನಲ್ಲಿರುವ ಪುಸ್ತಕಗಳು ಸಾರ್ವಜನಿಕರಿಗೆ ರಿಯಾಯಿತಿ ದರಗಳಲ್ಲಿ ಮಾರಾಟಕ್ಕೆ ಲಭ್ಯವಿರುವುದು ಹಾಗೂ ದರಗಳಿಗೆ ಸಂಬಂದಿತ ಕಾರ್ಯನೀತಿಯು ಸಾಮಾನ್ಯ ಜನತೆಗೆ ಆಕರ್ಷಕವಾಗಿರುವುದು ಹಾಗೂ ಸುಲಭ ದರಗಳಲ್ಲಿ ಲಭ್ಯವಿರುವುದು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಹಳೆಯ ದಾಸ್ತಾನಿನ ವಿಲೇವಾರಿಗಾಗಿ ಮಾಡಲಾಗಿರುವ ಪ್ರಯತ್ನಗಳ ಬಗ್ಗೆ ಹಾಗೂ ದರಗಳ ಕಾರ್ಯನೀತಿಯ ಸಮರ್ಥನೆಯ ಬಗ್ಗೆ ಉತ್ತರವು ಮೌನವಾಗಿದ್ದಿತು.

**ಶಿಫಾರಸ್ಸು: 17**

**ಇಲಾಖೆಯು ಸಾರ್ವಜನಿಕರಿಗೆ ಆಕರ್ಷಕವಾಗಿರುವಂತಹ ಹಾಗೂ ಸುಲಭ ದರಗಳಲ್ಲಿ ಲಭ್ಯಗೊಳ್ಳುವಂತಹ ಒಂದು ಸಮರ್ಥನೀಯ ದರ ನಿಗದಿ ಕಾರ್ಯನೀತಿಯನ್ನು ರೂಪಿಸತಕ್ಕದ್ದು ಹಾಗೂ ಪ್ರಕಟಣೆಗಳ ಸಮಯೋಚಿತ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.**

[36] ₹ 32.20 ಲಕ್ಷ ವೆಚ್ಚದಲ್ಲಿ.

## ಸಿಬ್ಬಂದಿ ನಿರ್ವಹಣೆ

**4.7** ಕ್ರಿಯಾಯೋಜನೆಗಳ ಅನುಪಸ್ಥಿತಿ ಹಾಗೂ ಉತ್ಖನನ, ಸುರಕ್ಷತೆ ಮತ್ತು ಸಂರಕ್ಷಣೆ ಕಾರ್ಯಚಟುವಟಿಕೆಗಳಲ್ಲಿ ಅಗತ್ಯತೆ ಇರುವಂತಹ ಕಾಮಗಾರಿಗಳ ಪರಿಮಾಣದ ನಿರ್ಧಾರಣೆ ಮಾಡದಿರುವುದರ ಕಾರಣ ಇಲಾಖೆಯು ತನ್ನ ಬದ್ಧತೆಯನ್ನು ಪೂರೈಸುವ ಸಲುವಾಗಿ ಅಗತ್ಯವಿರುವಂತಹ ಸಿಬ್ಬಂದಿ ಸಂಖ್ಯೆಯನ್ನು ಯಾಥಾರ್ಥತೆಯಿಂದ ನಿರ್ಧಾರಣೆ ಮಾಡಲು ಆಗಿರಲಿಲ್ಲ.

ಮುಂದುವರೆದು, ಇಲಾಖೆಯು ಚಾಲ್ತಿಯಲ್ಲಿದ್ದಂತಹ ಸಿಬ್ಬಂದಿ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳನ್ನು ಹೊಂದಿದ್ದಿತು. 31 ಮಾರ್ಚ್ 2022ರಲ್ಲಿದ್ದಂತೆ ಇಲಾಖೆಯು 163ರಷ್ಟು[37] ಸಿಬ್ಬಂದಿ ಸಂಖ್ಯೆಯನ್ನು ಹೊಂದಿದ್ದಿತು ಹಾಗೂ 219 ಮಂಜೂರಾಗಿದ್ದಂತಹ ಸಂಖ್ಯೆಗಳಿಗೆ ಪ್ರತಿಯಾಗಿ 56 ಹುದ್ದೆಗಳು (ಶೇಕಡ 26) ಖಾಲಿ ಇದ್ದವು. ತಾಂತ್ರಿಕ[38] ಮತ್ತು ತಾಂತ್ರಿಕೇತರ[39] ವಿಭಾಗಗಳಲ್ಲಿ ಖಾಲಿ ಹುದ್ದೆಗಳಿದ್ದವು ಹಾಗು 4 ಖಾಲಿಯಿದ್ದಂತಹ ಹುದ್ದೆಗಳು 25 ವರ್ಷಗಳನ್ನು ಮೀರಿದ ಅವಧಿಗೆ ಅವಿರತವಾಗಿ ಖಾಲಿ ಉಳಿದಿದ್ದವು. 31 ಮಾರ್ಚ್ 2022ರಲ್ಲಿದಂತೆ ಮಂಜೂರಾತಿಗೊಂಡಿರುವ, ಕಾರ್ಯಪ್ರವೃತ್ತರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸ್ಥಿತಿಗತಿಗಳನ್ನು ***ಅನುಬಂಧ 12ರಲ್ಲಿ*** ನೀಡಲಾಗಿರುವುದು.

### *ಸ್ಮಾರಕಗಳ ಸಹಾಯಕರುಗಳು (ಅಟೆಂಡೆನ್ಸ್)/ ಪಾಲಕರುಗಳು ಲಭ್ಯವಿರದಿದ್ದುದು*

**4.7.1** ಸ್ಮಾರಕಗಳ ಸಹಾಯಕರುಗಳು ಸ್ಮಾರಕಗಳ ಮೇಲೆ ಬೆಳೆದಿರುವ ಸಸ್ಯಗಳನ್ನು ತೆಗೆದುಹಾಕುವುದು, ಸ್ವಚಗೊಳಿಸುವುದು, ಧೂಳುತೆಗೆಯುವುದು ಕಸಗುಡಿಸುವುದು, ಭೇಟಿ ನೀಡುವವರನ್ನು ನಿಯಂತ್ರಿಸುವುದು ಇತ್ಯಾದಿಗಳನ್ನು ಒಳಗೊಂಡಂತೆ ಸಂರಕ್ಷಿತ ಸ್ಮಾರಕಗಳ ದೈನಂದಿನ ನಿರ್ವಹಣೆಗೆ ಜವಾಬ್ದಾರಿಯುತರಾಗಿರುತ್ತಾರೆ. ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಎಲ್ಲಾ 71 ಸ್ಮಾರಕಗಳಲ್ಲಿ ಇಲಾಖೆಯು ಯಾವುದೇ ಸ್ಮಾರಕಗಳ ಸಹಾಯಕರುಗಳನ್ನು ನೇಮಕ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಮುಂದುವರೆದು, ಸರ್ಕಾರ /ಇಲಾಖೆಯು ಸಂರಕ್ಷಣೆ ಯೋಜನೆಯಡಿಯಲ್ಲಿ ರಾಜ್ಯದಲ್ಲಿ 240 ತಾಲ್ಲೂಕುಗಳ ಪೈಕಿ 19 ತಾಲ್ಲೂಕುಗಳಲ್ಲಿ 9,552 ಸ್ಮಾರಕಗಳನ್ನು ಗುರುತಿಸುವ ದೃಷ್ಟಿಯಿಂದ ಸಿಬ್ಬಂದಿಯ ಅಗತ್ಯತೆಯನ್ನು ವೈಜ್ಞಾನಿಕವಾಗಿ ನಿರ್ಧಾರಣೆ ಮಾಡಿರಲಿಲ್ಲ. ಈ ಸ್ಮಾರಕಗಳ ರಕ್ಷಣೆ ಮತ್ತು ಸುರಕ್ಷತೆಗಾಗಿ ಅಗತ್ಯವಿರುವಂತಹ ಹಣಕಾಸನ್ನು ಕೂಡ ಇಲಾಖೆಯು ವಿಶ್ಲೇಷಣೆ ಮಾಡಿರಲಿಲ್ಲ.

### *ತಾಂತ್ರಿಕ ಸಿಬ್ಬಂದಿಯ ಕೊರತೆ*

**4.7.2** ಸಿಬ್ಬಂದಿ ನಿಯುಕ್ತಿ ಸ್ಥಿತಿಗತಿಯ ಬಗ್ಗೆ ತ:ಖ್ತೆಯ ಒಂದು ಸಮೀಕ್ಷೆಯು ತಾಂತ್ರಿಕ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಮಂಜೂರಾತಿಗೊಂಡಿದ್ದ 57 ಹುದ್ದೆಗಳಿಗೆ ಪ್ರತಿಯಾಗಿ ಕೇವಲ 27 ಹುದ್ದೆಗಳನ್ನು ಕಾರ್ಯಚರಣೆಗೊಳಿಸಲಾಗಿದ್ದು, ಉಳಿದ 30 ಹುದ್ದೆಗಳು *(ಶೇಕಡ 53)* ಖಾಲಿ ಇದ್ದವು. ಪ್ರಾಚೀನ ಸ್ಮಾರಕಗಳು, ವಸ್ತುಸಂಗ್ರಹಾಲಯಗಳು ಮತ್ತು ಪಾರಂಪರಿಕ ಕಟ್ಟಡಗಳ ನಿರ್ವಹಣೆಗಾಗಿ ಅತ್ಯಾವಶ್ಯಕವಾಗಿರುವಂತಹ ತಾಂತ್ರಿಕ ಸಿಬ್ಬಂದಿಗಳ ಹುದ್ದೆಗಳನ್ನು ಒಂದು ಧೀರ್ಘಕಾಲದಿಂದ (ಒಂದರಿಂದ ಇಪ್ಪತ್ತೈದು ವರ್ಷಗಳು) ಖಾಲಿ ಬಿಡಲಾಗಿದ್ದಿತು. ನಿರ್ದೇಶಕರ (ಪುರಾತತ್ವ) ಒಂದು ಹುದ್ದೆಯನ್ನು ಹಂಪಿಗೆ ಸ್ಥಳಾಂತರಿಸಿದ ಕಾರಣ ಜನವರಿ 2019ರಿಂದಲೂ ಖಾಲಿ ಉಳಿದಿದ್ದಿತು.

---

[37] ಆಗಸ್ಟ್ 2019ರಲ್ಲಿ, ಕರ್ನಾಟಕ ಸರ್ಕಾರವು ಖಾಲಿ ಹುದ್ದೆಗಳಿಗೆ ಪ್ರತಿಯಾಗಿ 90 ಖಾಲಿ ಹುದ್ದೆಗಳಿಗಾಗಿ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಳ್ಳಲು ಇಲಾಖೆಗೆ ಅನುಮತಿ ನೀಡಿತು. ಇಲಾಖೆಯು ಗುಂಪು ಸಿ ಮತ್ತು ಡಿ ಅಡಿಯಲ್ಲಿ 85 ಹುದ್ದೆಗಳನ್ನು ಭರ್ತಿ ಮಾಡಿಕೊಂಡು ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡದೆಯೇ ಉಳಿಸಿದ್ದಿತು.

[38] ನಿರ್ದೇಶಕರು – ಪುರಾತತ್ವ, ಉಪ–ನಿರ್ದೇಶಕರು, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ತಾಂತ್ರಿಕ ಸಹಾಯಕರು, ಕ್ಯೂರೇಟರು, ಸಹಾಯಕ ಕ್ಯೂರೇಟರು, ಸರ್ವೇಯರು, ಶಾಸನತಜ್ಞರು, ಛಾಯಾಚಿತ್ರಗಾರರು, ಕಲಾಕಾರರು ಮತ್ತು ಸ್ಮಾರಕಗಳ ಸಹಾಯಕರುಗಳು, ಇತ್ಯಾದಿ.

[39] ಪತ್ರಾಂಕಿತ ಸಹಾಯಕರು, ಕಚೇರಿ ಸೂಪರಿಂಟೆಂಡೆಂಟ್, ಇತರೆ ಗುಂಪು ಸಿ ಮತ್ತು ಡಿ ಹುದ್ದೆಗಳು.

ಇಲಾಖೆಯು ಅನೇಕ ಸಂದರ್ಭಗಳಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ಸರ್ಕಾರ /ಕರ್ನಾಟಕ ಲೋಕಸೇವಾ ಆಯೋಗ /ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವುಗಳನ್ನು ಕೋರಿದ್ದಿತಾದರೂ ಅವುಗಳು ಈ ದಿನದವರೆಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ಯಾವುದೇ ಫಲದಾಯಕ ಕ್ರಮ ತೆಗೆದುಕೊಳ್ಳಲಿಲ್ಲ. ಈ ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯಲ್ಲಿ[40], ಒಂದು ಟೀಕೆಟಿಪ್ಪಣಿಗೆ ಸರ್ಕಾರವು ತಾಂತ್ರಿಕ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿದ್ದಿತು. ಆದಾಗ್ಯೂ, ಈ ಖಾಲಿ ಹುದ್ದೆಗಳು ಭರ್ತಿಯಾಗದೇ ಉಳಿದಿರುವವು.


ಈ ರೀತಿಯಾಗಿ ಅಗತ್ಯ ತಾಂತ್ರಿಕ ತಜ್ಞ ಅನುಭವದೊಂದಿಗೆ ತಾಂತ್ರಿಕ ಸಿಬ್ಬಂದಿಯು ಒಂದು ಸವಿಸ್ತೃತ ಅವಧಿಯಾದ್ಯಂತ ಲಭ್ಯವಿಲ್ಲದಿರುವುದು ಈ ಕೆಳಗೆ ತೋರಿಸಿರುವಂತೆ ಕೆಲವು ಸ್ಮಾರಕಗಳು ನಿರ್ಲಕ್ಷ್ಯಕ್ಕೆ ಒಳಗಾಗುವಲ್ಲಿ ಪರಿಣಮಿಸಿರುವುದು.




**ಛಾಯಚಿತ್ರ ಸಂಖ್ಯೆ 4.40: ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಹೊಡಾಲ್‌ನಲ್ಲಿ ಸಂರಕ್ಷಿತ ಸ್ಮಾರಕವನ್ನು ಸಂರಕ್ಷಿಸದಿರುವುದು.**




**ಛಾಯಚಿತ್ರ ಸಂಖ್ಯೆ 4.41 : ಹಾಸನ ಜಿಲ್ಲೆ ಮತ್ತು ತಾಲ್ಲೂಕಿನ ಕೊಂಡಜ್ಜಿಯಲ್ಲಿ ಶ್ರೀ ವಿಷ್ಣುದೇವಸ್ಥಾನದ ಸಮೀಪ ಸ್ಮಾರಕವು ಕಸಕಡ್ಡಿಯ ನಡುವೆ ಬಿದ್ದಿರುವುದು.**




**ಛಾಯಚಿತ್ರ ಸಂಖ್ಯೆ 4.42 : ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಶಿರಗೋಡದಲ್ಲಿ ಮುಕ್ತ ಪ್ರದೇಶದಲ್ಲಿ ಸ್ಮಾರಕವು ಬಿದ್ದಿರುವುದು.**

[40] 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ ಸಂಖ್ಯೆ 2ರ (ಸಿವಿಲ್) ಕರ್ನಾಟಕದಲ್ಲಿ ಪ್ರಾಚೀನ ಸ್ಮಾರಕಗಳ ರಕ್ಷಣೆ ಮತ್ತು ಸುರಕ್ಷತೆಯ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ.

ತಾಂತ್ರಿಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ/ ಗುತ್ತಿಗೆ ಆಧಾರದ ಮೂಲಕ ಭರ್ತಿ ಮಾಡಿಕೊಳ್ಳಲು ಇಲಾಖೆಯು ಅಗತ್ಯ ಅನುಮತಿಯನ್ನು ಕೋರಿರುವುದು ಹಾಗೂ ಖಾಲಿ ಹುದ್ದೆಗಳ ಶೇಕಡ 50ರಷ್ಟನ್ನು ಭರ್ತಿ ಮಾಡುವ ಸಲುವಾಗಿ ಅನುಮತಿಯನ್ನು ನೀಡಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್–2023). ಆದಾಗ್ಯೂ, ಈ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಲು ಇಲಾಖೆಯು ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ.

***ವಸ್ತುಸಂಗ್ರಹಾಲಯಗಳಲ್ಲಿ ಮಾನವ ಸಂಪನ್ಮೂಲದ ಕೊರತೆ***

**4.7.3** 16 ವಸ್ತುಸಂಗ್ರಹಾಲಯಗಳು ಮತ್ತು ಒಂದು ಆರ್ಟ್ ಗ್ಯಾಲರಿಯ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು, ಇಲಾಖೆಯು 25 ತಾಂತ್ರಿಕ ಮತ್ತು 59 ತಾಂತ್ರಿಕೇತರ ಸಿಬ್ಬಂದಿಯ ಮಂಜೂರಾತಿಯನ್ನು ಹೊಂದಿತ್ತು, ಅದರಲ್ಲಿ ಒಂಬತ್ತು ತಾಂತ್ರಿಕ ಮತ್ತು 15 ತಾಂತ್ರಿಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಗಳಲ್ಲಿ ಖಾಲಿ ಸ್ಥಾನವು ಕ್ರಮವಾಗಿ *ಶೇಕಡಾ 64* ಮತ್ತು *ಶೇಕಡಾ 75* ರಷ್ಟಿದ್ದಿತು. ಮುಂದುವರೆದು, 2008 ರಿಂದ 11 ಸಹಾಯಕ ಕ್ಯುರೇಟರ್ ಹುದ್ದೆಗಳು ಖಾಲಿಯಿದ್ದವು. ಖಾಲಿ ಹುದ್ದೆಗಳ ಕಾರಣದಿಂದಾಗಿ, ಒಬ್ಬ ತಾಂತ್ರಿಕ ವ್ಯಕ್ತಿ ಎರಡು ವಸ್ತುಸಂಗ್ರಹಾಲಯಗಳನ್ನು[41] ನೋಡಿಕೊಳ್ಳುವ ಉಸ್ತುವಾರಿ ವ್ಯವಸ್ಥೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. 31ನೇ ಮಾರ್ಚ್ 2022ರಂತೆ ಮಂಜೂರಾದ ಸಾಮರ್ಥ್ಯ ಮತ್ತು ಸ್ಥಾನದಲ್ಲಿರುವ ಪುರುಷರ ವಿವರಗಳನ್ನು ***ಅನುಬಂಧ 13ರಲ್ಲಿ*** ನೀಡಲಾಗಿದೆ.

***ಶಿಲಾಶಾಸನಶಾಸ್ತ್ರ (ಎಪಿಗ್ರಫಿ) ಮತ್ತು ನಾಣ್ಯಶಾಸ್ತ್ರ***

**4.7.4** ಶಿಲಾಶಾಸನಶಾಸ್ತ್ರವು ಯಾವುದೇ ಭಾಷೆಯ ಬರವಣಿಗೆ ವ್ಯವಸ್ಥೆಯ ಮೂಲಮಾನವನ್ನು ಗುರುತಿಸುವ[42] ಹಾಗೂ ಅವುಗಳ ಬಳಕೆಯನ್ನು ಸಾಂಸ್ಕೃತಿಕ ಸಂದರ್ಭ ಮತ್ತು ದಿನಾಂಕಕ್ಕೆ ಸಂಬಂಧಿಸಿದಂತೆ ಅವುಗಳ ಬಳಕೆಯನ್ನು ವರ್ಗೀಕರಿಸುವುದು, ಅವುಗಳ ಅರ್ಥವನ್ನು ವಿವರಿಸುವುದು ಹಾಗೂ ಬರವಣಿಗೆ ಮತ್ತು ಬರಹಕಾರರುಗಳಿಗೆ ಸಂಬಂಧಿಸಿದಂತೆ ಯಾವ ತೀರ್ಮಾನ ಅಥವಾ ನಿರ್ಣಯವನ್ನು ಊಹಿಸಬಹುದು ಎಂಬುದರ ಬಗ್ಗೆ ವಿಜ್ಞಾನವಾಗಿರುತ್ತದೆ. ನಾಣ್ಯವಿದ್ಯೆಯು ಅಥವಾ ನಾಣ್ಯಶಾಸ್ತ್ರವು ನಾಣ್ಯಗಳು, ಟೋಕನ್ನುಗಳು ಕಾಗದ ರೂಪದಲ್ಲಿನ ಹಣ ಹಾಗೂ ಸಂಬಂಧಿತ ವಸ್ತುಗಳನ್ನು ಒಳಗೊಂಡಂತೆ ಕರೆನ್ಸಿಯ ಅಧ್ಯಯನ ಅಥವಾ ಸಂಗ್ರಹಣೆಯಾಗಿರುತ್ತದೆ.

ಇಲಾಖೆಯು ಪ್ರಾಚೀನ ಸ್ಮಾರಕಗಳ ಮೇಲೆ ಕಂಡುಬರುವಂತಹ ಪ್ರಾಚೀನ ಶಿಲಾಶಾಸನಗಳ ಅಧ್ಯಯನಕ್ಕಾಗಿ ಓರ್ವ ಶಾಸನತಜ್ಞರ[43] ಒಂದು ಮಂಜೂರಾಗಿರುವ ಹುದ್ದೆಯನ್ನು ಹೊಂದಿರುತ್ತದೆ. ಆದಾಗ್ಯೂ, ಈ ಹುದ್ದೆಯು ಮಾರ್ಚ್ 2000ದಿಂದಲೂ ಭರ್ತಿಯಾಗದೆಯೇ ಖಾಲಿ ಉಳಿದಿರುವುದು. ರಾಜ್ಯವು ಬಹಳಷ್ಟು ಸಂಖ್ಯೆಯ ಶಿಲಾಶಾಸನಗಳನ್ನು ಹೊಂದಿರುವುದರಿಂದ ಶಾಸನತಜ್ಞರ ಅನುಪಸ್ಥಿತಿಯು ಕಂಡುಬರುವಂತಹ ಶಿಲಾಶಾಸನಗಳನ್ನು ಅಧ್ಯಯನ ಮಾಡದಿರುವಲ್ಲಿ/ರಹಸ್ಯಲಿಪಿಗಳನ್ನು ಭೇದಿಸದಿರುವಲ್ಲಿ ಪರಿಣಮಿಸಬಹುದು. ನಾಣ್ಯಶಾಸ್ತ್ರ ಅಧ್ಯಯನಗಳಿಗಾಗಿ ಸೂಕ್ತ ಹುದ್ದೆಯನ್ನು ಗುರುತಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿದ್ದಿತಾದರೂ (ಡಿಸೆಂಬರ್ 2011)[44] ನಾಣ್ಯಶಾಸ್ತ್ರಜ್ಞರ ಹುದ್ದೆಯನ್ನು ಸೃಷ್ಟಿಸಿರುವುದಿಲ್ಲ.

[41] ಅಥಣಿ ಮತ್ತು ಕಿತ್ತೂರು ವಸ್ತು ಸಂಗ್ರಹಾಲಯಗಳನ್ನು ಒಬ್ಬ ಸಹಾಯಕನಿರ್ದೇಶಕರು ನೋಡಿಕೊಳ್ಳುತ್ತಿದ್ದರು. ಆದರೆ ರಾಯಚೂರು ವಸ್ತುಸಂಗ್ರಹಾಲಯವನ್ನು ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಪುರಾತತ್ವಶಾಸ್ತ್ರಜ್ಞರು ನೋಡಿಕೊಳ್ಳುತ್ತಿದ್ದರು.

[42] ಒಂದು ಭಾಷೆಯಲ್ಲಿ ಪದಗಳ ಗುಂಪನ್ನು ವ್ಯಕ್ತಪಡಿಸುವ ಸಲುವಾಗಿ ಉಪಯೋಗಿಸಲಾಗುವಂತಹ ಅಕ್ಷರಗಳು ಅಥವಾ ಅಕ್ಷರಗಳ ಸಂಯೋಜನೆ ಅಥವಾ ಗುಂಪು.

[43] ಪ್ರಾಚೀನ ಶಾಸನಗಳಿಂದ ಶಿಲೆ ಮುಂತಾದ ದೃಢ ಅಥವಾ ಬಾಳಿಕೆಬರುವಂತಹ ವಸ್ತುವಿನ ಮೇಲೆ ದಾಖಲಿಸಲಾಗಿರುವಂತಹ ಲಿಖಿತ ವಿಷಯಗಳನ್ನು ಅಧ್ಯಯನ ಮಾಡುವಂತಹ ಓರ್ವ ವ್ಯಕ್ತಿ.

[44] 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ಸಾಲಿಗೆ ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ವರದಿ ಸಂಖ್ಯೆ 2ರ (ಸಿವಿಲ್) ***ಕಂಡಿಕೆ 2.3.11.41ಕ್ಕೆ*** ನೀಡಲಾಗಿದ್ದ ಉತ್ತರ.




**ಛಾಯಾಚಿತ್ರ ಸಂಖ್ಯೆ 4.43: ಕಲಬುರಗಿಯ ಸರ್ಕಾರಿ ವಸ್ತುಪ್ರದರ್ಶನದಲ್ಲಿ ಅಡಕದಲ್ಲಿನ ರಹಸ್ಯಲಿಪಿಗಳನ್ನು ಭೇದಿಸದೆಯೇ ಶಿಲಾಶಾಸನವನ್ನು ಪ್ರದರ್ಶನಕ್ಕೆ ಇಟ್ಟಿರುವುದು.**




**ಛಾಯಾಚಿತ್ರ ಸಂಖ್ಯೆ 4.44: ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚಿಕ್ಕಲಪರ್ವಿಯಲ್ಲಿ ಸ್ಥಳೀಯರಿಗೆ ಕಂಡುಬಂದಿರುವಂತಹ ವಿಜಯನಗರ ದೊರೆಯ (1521ಕ್ಕೆ ಸಂಬಂಧಿತ) ಶಿಲಾಶಾಸನಗಳು/ಲಿಪಿಗಳು.**

**ಶಿಫಾರಸ್ಸು: 18**

**ತಾಂತ್ರಿಕ ಮತ್ತು ತಾಂತ್ರಿಕೇತರ ವಿಭಾಗದಲ್ಲಿ ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ಸಲುವಾಗಿ ಅಗತ್ಯ ಕ್ರಮಗಳನ್ನು ತಕ್ಷಣವೇ ತೆಗೆದುಕೊಳ್ಳುವ ಅಗತ್ಯತೆ ಇರುತ್ತದೆ.**

***ವಿಪತ್ತು ನಿರ್ವಹಣೆಗಾಗಿ ಯೋಜನೆ***


**4.8** ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ *ಕಲಮು 15.03* ವಿಪತ್ತು ನಿರ್ವಹಣೆಗೆ ಸಂಬಂಧಿತ ಯೋಜನೆಯನ್ನು ಒಂದು ಸ್ಮಾರಕಕ್ಕಾಗಿನ ಸಂರಕ್ಷಣಾ ಪೂರ್ವಭಾವಿ ಯೋಜನಾ ಪೂರ್ವ ಪ್ರಮುಖ ಅಗತ್ಯತೆಯನ್ನಾಗಿ ಮಾಡತಕ್ಕದ್ದು ಎಂಬುದಾಗಿ ನಿರ್ಧಿಷ್ಟಪಡಿಸಿರುವುದು. ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಹೆಚ್ಚಿನ ಪ್ರಮಾಣದಲ್ಲಿ ವಿವಿಧ ರೀತಿಯ ಅಪಾಯಗಳಿಗೆ (ಪ್ರಾಕೃತಿಕ ಮತ್ತು ಮಾನವ ಮಧ್ಯಸ್ಥಿಕೆಯ) ಒಳಪಟ್ಟಿರುತ್ತವೆ. ಒಂದು ಅಪಾಯವನ್ನು ತೊಡೆದುಹಾಕುವ ಸಲುವಾಗಿ ಸಂಬಂಧಿತ ಎಲ್ಲಾ ಸಂಸ್ಥೆಗಳು ಸಮರ್ಪಕವಾಗಿ ಸಿದ್ಧವಾಗಿರುವುದು ಹಾಗೂ ತ್ವರಿತ ಪ್ರತಿಕ್ರಿಯೆ ಹಾಗೂ ಅಪಾಯದಿಂದ ಹೊರಬರುವ ಸಲುವಾಗಿ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಾಗಿರುತ್ತದೆ.

ಇಲಾಖೆಯು ರಾಜ್ಯ ಸಂರಕ್ಷಿತ ಸ್ಮಾರಕಗಳು ಮತ್ತು ವಸ್ತು ಸಂಗ್ರಹಾಲಯಗಳಿಗಾಗಿ ಒಂದು ವಿಪತ್ತು ನಿರ್ವಹಣಾ ಪೂರ್ವಭಾವಿ ಯೋಜನೆಯನ್ನು ರೂಪಿಸಿರುವುದಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಒಂದು ಸಮರ್ಪಕ ವಿಪತ್ತು ನಿರ್ವಹಣಾ ಪೂರ್ವಭಾವಿ ಯೋಜನೆಯ ಅನುಪಸ್ಥಿತಿಯಲ್ಲಿ ಸ್ಮಾರಕಗಳು ಭವಿಷ್ಯದಲ್ಲಿನ ಪ್ರಾಕೃತಿಕ ವಿಕೋಪಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮುಕ್ತವಾಗಿರುತ್ತವೆ. ಮುಂದುವರೆದು, ಇಲಾಖೆಯು ಯಾವುದೇ ವಿಪತ್ತು/ತುರ್ತು ಸಂದರ್ಭಗಳ ನಿರ್ವಹಣೆಗಾಗಿ ಸಿಬ್ಬಂದಿಗೆ ಸೂಕ್ತ ತರಬೇತಿಯನ್ನೂ ಕೂಡ ನೀಡಿರುವುದಿಲ್ಲ.

ರಾಷ್ಟ್ರೀಯ ಸಂರಕ್ಷಣಾ ಕಾರ್ಯನೀತಿಯ ಅನುಸಾರ ವಿಪತ್ತು ನಿರ್ವಹಣಾ ಪೂರ್ವಭಾವಿ ಯೋಜನೆಯನ್ನು ಅಳವಡಿಸಿಕೊಳ್ಳುವ ಸಲುವಾಗಿ ಸರ್ಕಾರಿ ಆದೇಶವನ್ನು ನೀಡುವುದಕ್ಕಾಗಿ ಇಲಾಖೆಯು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023).




**ಛಾಯಾಚಿತ್ರ ಸಂಖ್ಯೆ 4.46: ನೀರಿನ ಸೋರಿಕೆಯ ಕಾರಣ ಹಾಗೂ ಪಾಚಿಯು ಬೆಳೆದಿರುವ ಕಾರಣ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಂಸಭಾವಿಯಲ್ಲಿ ಈಶ್ವರ ದೇವಸ್ಥಾನದ ಸ್ಥಿತಿಗತಿ.**




**ಛಾಯಾಚಿತ್ರ ಸಂಖ್ಯೆ 4.47: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ದೇವದುರ್ಗ ಕೋಟೆಯು ಕುಸಿಯುವ ಸ್ಥಿತಿಯಲ್ಲಿರುವುದು.**